ಚಿಂತೆ ಪಾಪ ಭಯಗಳಿಗೊಂದೇ ದಾರಿ

ಶರಣಾಗತಿ

ಬೆ. ನಾ. ವಿಜಯೀಂದ್ರಾಚಾರ್ಯ

Rarest Archive

ಶ್ರೀಃ

ಋಜುಯೋಗಿ ರಾಜರಿಂದ ಪ್ರಣೀತ
ಚಿಂತೆ - ಪಾಪ - ಭಯಗಳಿಗೊಂದೇ ದಾರಿ

"ಶರಣಾಗತಿ"

ಶ್ರೀ

ಚಿಂತೆ-ಪಾಪ-
ಭಯಗಳು ಬದುಕಿನ ರೋಗ
ಗಳೆನಿಸಿವೆ. ಇವುಗಳಿಗೆ ಹರಿಯಪಾದ-
ಗಳಲ್ಲಿ ಶರಣುಹೊಂದುವುದೊಂದೇ ಮದ್ದು.
ಈ ಮದ್ದನ್ನು ತಯಾರಿಸಿದವರು ಯೋಗಿ ಶ್ರೇಷ್ಠರಾದ ಶ್ರೀ
ವಾದಿರಾಜತೀರ್ಥರು ಶ್ರೀ ವಿಜಯೀಂದ್ರ ತೀರ್ಥರಂತ ಮಹಾ-
ನುಭಾವರು. ಇವರ ನುಡಿಗಳನ್ನು ಮನನಮಾಡಿದರೆ
ಅಪರಿಹಾರ್ಯವಾದ ಸಮಸ್ಯೆಗಳಿಗೂ ಪರಿಹಾರ
ದೊರೆಯುವುದು. ಇವರಿಂದ ಪ್ರಣೀತವಾದ
ಚಿಂತಾಖಂಡನ - ಅಭವಸಂಸ್ತವ
ಪಾಪವಿಮೋಚನ ಸ್ತೋತ್ರಗಳ
ರೂಪಾಂತರವೇ ಈಗ
ಶರಣಾಗತಿ ಎಂಬ
ಹೆಸರಿನಿಂದ ನಿಮ್ಮ
ಕೈ ಸೇರಿದೆ.

Rarest Archives

Rarest Archiver

ಋಜುಯೋಗಿರಾಜರ ಶರಣಾಗತಿ
ವಿಕೃತಿ ಸಂವತ್ಸರ ಕಾರ್ತಿಕ ಬಹುಳ ಸಪ್ತಮಿಯಂದು ಶ್ರೀ ಶ್ರೀ ವಿದ್ಯಾಧೀಶತೀರ್ಥರ ಅಮೃತ ಹಸ್ತದಿಂದ ಬಿಡುಗಡೆ ಹೊಂದಿತು.

ಲೇಖಕರು : ಬೆ. ನಾ. ವಿಜಯೀಂದ್ರಾಚಾರ್ಯ

English Translation : V. SARAYU

ಪ್ರತಿ : 1000

ಪ್ರಕಾಶಕರು
ಶ್ರೀ ಹರಿವಾಯು ಪ್ರಕಾಶನ
ಮೈಸೂರು

ಮುಖಪುಟ ವಿನ್ಯಾಸ :

ಮುದ್ರಕರು : ಎ. ಜಿ. ಸುವ್ರತೀಂದ್ರ
ವಾಣೀ ಪ್ರೆಸ್, ಗೀತಾರಸ್ತೆ, ಚಾಮಪುರಂ, ಮೈಸೂರು-5
ದೂರವಾಣಿ : 0821-2330295

Rarest Archiver

श्री श्री विश्वेशतीर्थ श्रीपादाः
जगद्गुरु श्रीमन्मध्वाचार्यमूलमहासंस्थानाम्
श्री अधोक्षजतीर्थपीठम् श्रीपेजावरमठः
उडुपि

ಅನುಗ್ರಹ ಸಂದೇಶ

ಜೀವನದಲ್ಲಿ ನಾನಾ ರೀತಿಯ ದೈಹಿಕ ಮಾನಸಿಕ ಚಿಂತೆಗಳು ನಮ್ಮನ್ನು ಕಾಡುತ್ತವೆ. ಚಿಂತನ ಒಂದೇ ಈ ಎಲ್ಲಾ ಚಿಂತೆಗಳಿಗೆ ಪರಿಹಾರ. ಶರೀರ, ಇಂದ್ರಿಯ, ಜೀವ-ಪರಮಾತ್ಮರುಗಳು ವಿಶ್ಲೇಷಣೆ ಮಾಡಿ ಚಿಂತೆಯ ಮೂಲವನ್ನು ಹುಡುಕಿ, ಕೆದಕಿ ನಾವು ಮಾಡುವ ಚಿಂತನದಿಂದ ಮೂಡುವ ಸತ್ಯದರ್ಶನವು, ಮೋಹದ ಜಾಲವನ್ನು ಕಿತ್ತೆಸೆಯಬಲ್ಲದು. ಆಗ ಚಿಂತೆಗಳೆಲ್ಲಾ ಚದುರಿ ನಮ್ಮ ಹೃದಯ ಆಗಸವು, ನಿರಭ್ರಶುಭ್ರವಾಗಿ ಪ್ರಸನ್ನತೆಯಿಂದ ಕಂಗೊಳಿಸಬಲ್ಲದು.

ಭೌತಿಕಚಿಂತೆಗಳು ಚಿತೆಯಾಗಿ ನಮ್ಮನ್ನು ವಿನಾಶಗೊಳಿಸಿದರೆ ಆಧ್ಯಾತ್ಮಿಕ ಚಿಂತೆಯು ಚಿತಿಯಾಗಿ (ಜ್ಞಾನವಾಗಿ) ಚೈತನ್ಯದ ಚಿಲುಮೆಯಾಗಿ ನಮ್ಮ ವಿಕಾಸಕ್ಕೆ ಸಾಧನವಾಗುವುದು. ಆಧ್ಯಾತ್ಮಿಕ ಚಿಂತನೆಗೆ ಭಗವತ್ ಚಿಂತನೆಯು ಸಂಜೀವಿನಿಯಾದರೆ, ಭೌತಿಕ ಚಿಂತೆಯ ನಿವಾರಣೆಗೂ ಭಗವತ್‌ಚಿಂತೆಯು ದಿವ್ಯೌಷಧವಾಗಿದೆ. ಭಗವತ್‌ಚಿಂತನೆಯಿಂದ ನಾವು ಸಕಲೇಷ್ಟಗಳನ್ನು ಪಡೆಯುವುದರ ಜೊತೆಗೆ ಜೀವನದಲ್ಲಿ ಆತ್ಮವಿಶ್ವಾಸವನ್ನು ಪಡೆಯಬಹುದು.

ನಮ್ಮ ಪ್ರಿಯಶಿಷ್ಯನಾದ ವಿಜಯೀಂದ್ರನು ತನ್ನ ವಿವಾಹ ಮಹೋತ್ಸವದ ಮಂಗಲ ಸಂದರ್ಭದಲ್ಲಿ ಶ್ರೀಮದ್ ವಾದಿರಾಜ ಗುರುವರ್ಯರ ಉಪದೇಶದ ಆಧಾರದಲ್ಲಿ ಚಿಂತೆಯ ಬಗ್ಗೆ ಚಿಂತನೆಯನ್ನು ನೀಡುವ ಈ ಕೃತಿಯನ್ನು ತನ್ನ ನವವಧುವಿನ ಸಹಕಾರದೊಂದಿಗೆ ರಚಿಸಿರುವನು. ಇವರು ನಿಶ್ಚಿಂತೆಯಿಂದ ತಮ್ಮ ವೈವಾಹಿಕ ಜೀವನವನ್ನು ಸುಖ-ಸಮೃದ್ಧಿಯಿಂದ ನಡೆಸಿ ವಿಜಯಶಾಲಿಗಳಾಗುವಂತೆ ಶ್ರೀಕೃಷ್ಣನು ಅನುಗ್ರಹಿಸಲಿ.

ಇತ್ಯನೇಕ ನಾರಾಯಣ ಸ್ಮರಣೆಗಳು
ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದರು

Rarest Archives

श्री श्री विद्याधीशतीर्थश्रीपादाः

जगद्गुरु श्रीमन्मध्वाचार्यमूलमहासंस्थानम्
श्री हृषीकेशतीर्थपीठम् श्रीपलिमारुमठः
पर्याय श्रीपलिमारुहृषीकेशतीर्थ पीठम्
श्रीकृष्णमठः, उडुपि

ಅನುಗ್ರಹ ಸಂದೇಶ

ಚಿಂತಾಯಾಶ್ಚ ಚಿತಾಯಾಶ್ಚ ಬಿಂದುಮಾತ್ರಂ ವಿಶೇಷಕಂ |
ಚಿತಾ ದಹತಿ ನಿರ್ಜೀವಂ ಚಿಂತಾ ದಹತಿ ಜೀವಿನಂ ||

ಚಿತೆಗೂ ಚಿಂತೆಗೂ ಬಿಂದುವಿನ ವ್ಯತ್ಯಾಸ. ಆದರೆ ಆ ಬಿಂದುವಿನಿಂದಾದ ಕಾರ್ಯ ಸಿಂಧುವಿನಷ್ಟು ಅಗಾಧ. ಚಿತೆ ಜಡವನ್ನು ಸುಡುತ್ತದೆ. ಚಿಂತೆ ಚೇತನವನ್ನೇ ಸುಡುತ್ತದೆ. ಒಟ್ಟಿನಲ್ಲಿ ಎರಡರ ಕಾಯಕವೂ ಸುಡುವುದೇ. ಆ ಬಿಂದುವನ್ನು ಶೂನ್ಯವೆಂದು ಬಗೆದರೆ ನಮ್ಮ ಅಧಃಪತನವಾಗುತ್ತದೆ. ಆ ಬಿಂದುವನ್ನು ಪೂರ್ಣವೆಂದು ತಿಳಿದರೆ ಜಡದಂತಿರುವ ನಮ್ಮ ಕರ್ಮವನ್ನು ನಾಶಮಾಡುತ್ತದೆ. ಜ್ವರಕ್ಕೆ ತಲೆನೋವು, ಮೈಕೈ ನೋವು, ಹೃದ್ರೋಗಕ್ಕೆ ಹೃದಯಬೇನೆ, ಕ್ಯಾನ್ಸರ್‌ಗೆ ಅದಿರುವ ಜಾಗದಲ್ಲಿ ಉರಿ, ಇದು ರೋಗಗಳ ನೋವು. ಅದೇ ರೀತಿ ಭವರೋಗದ ಜೊತೆಗಿರುವ ನೋವೆಂದರೆ ಚಿಂತೆ. ಈ ನೋವಿನ ನಿವಾರಣೆಗೆ painkiller ಶ್ರೀಮದ್‌ವಾದಿರಾಜರು ರಚಿಸಿದ 'ಚಿಂತಾಖಂಡನ'.

ಆಸೆ ಬೇಕು ಆದರೆ ದುರಾಶೆ ಇರಬಾರದು. ಈ ದುರಾಶೆ ಮತ್ತು ನಾನು ನನ್ನದು ಎನ್ನುವ ಮದ ಚಿಂತೆಗೆ ಕಾರಣ. ದುರಾಶೆ ನಿಃಶೇಷವಾದಾಗ, ಮದವನ್ನು ದಮನ ಮಾಡಿದಾಗ ಚಿಂತೆ ನಾಶವಾಗುತ್ತದೆ. ಪ್ರಾಪಂಚಿಕವಸ್ತುಗಳ ಕಡೆಗೆ ಮನಸ್ಸು ಹೋದಾಗ ಅದು ಬೇಕೆನ್ನುವ ಆಸೆ, ಸಿಗದಿದ್ದಾಗ ದುಃಖ, ಕೋಪಮೂಲಕವಾಗಿ ಚಿಂತೆಯಾಗುತ್ತದೆ. ಇದು ನಮ್ಮನ್ನು ಕುಗ್ಗಿಸುತ್ತದೆ. ಮನಸ್ಸು ಭಗವಂತನ ಕಡೆಗೆ ಹರಿದಾಗ ಅದು ಮನನವಾಗುತ್ತದೆ. ಅದೇ ಬ್ರಹ್ಮಜಿಜ್ಞಾಸವಾಗುತ್ತದೆ. ಈ

Rarest Archiver

ರೀತಿಯಾದ ಚಿಂತೆಯಿಂದ ನಮ್ಮ ಆತ್ಮೋದ್ಧಾರವಾಗುತ್ತದೆ. ಆದ್ದರಿಂದಲೇ ಭಗವಂತನಲ್ಲಿ ನಮ್ಮನ್ನು ಸಮರ್ಪಿಸಿದಾಗ ಚಿಂತೆ ನಾಶವಾಗುತ್ತದೆ. ಈ ರೀತಿಯಾಗಿ ಶ್ರೀಮದ್‌ವಾದಿರಾಜರು ಚಿಂತಾಖಂಡನೆಯನ್ನು ಮಾಡಿದ್ದಾರೆ. ಈ ರೀತಿಯಾಗಿ ಸಂಪೂರ್ಣವಾಗಿ ಚಿಂತೆಯನ್ನು ನಾಶಮಾಡಿದ್ದಾರೆ. ಆದರೆ ಅದು ಅಂತಹ ಜ್ಞಾನಿಗಳಿಂದ ಮಾತ್ರ ಸಾಧ್ಯ. ನಮ್ಮಂತಹ ಅಜ್ಞಾನಿಗಳಿಂದ ಅಸಾಧ್ಯ. ನಾವು ನಾಶ ಮಾಡಲು ಸಾಧ್ಯವಿಲ್ಲ. ಆದರೆ ಉಂಟಾದ ಚಿಂತೆಗೆ ಪರಿಹಾರವನ್ನು ಕೊಡಬಹುದು. ಅದಕ್ಕಾಗಿ ವಿಜಯೀಂದ್ರರು ಚಿಂತೆಗೊಂದು ಚಿಕಿತ್ಸೆಯನ್ನು ನೀಡಿದ್ದಾರೆ. ಆ ಮೂಲಕವಾಗಿ ಜನಸಾಮಾನ್ಯರಿಗೂ ಅನುಕೂಲತೆಯನ್ನು ಮಾಡಿಕೊಟ್ಟಿದ್ದಾರೆ.

ಸದಾಚಾರ, ನಿತ್ಯಪಾಠ-ಪ್ರವಚನಶೀಲ, ವಾಕ್ಪಟುತ್ವ, ಮಧ್ವಸಿದ್ಧಾಂತನಿಷ್ಠೆ, ಗುರುಗಳಲ್ಲಿ ಭಕ್ತಿಪೂರ್ವಕ ಪ್ರೀತಿ ಮೊದಲಾದ ಗುಣಗಳಿಂದ ವಿಜಯೀಂದ್ರರು ಕೂಡಿದ್ದಾರೆ. ಒಂದು ರೀತಿಯಲ್ಲಿ ಇವರು ಗುಣಾರ್ಣವ.

ಅರ್ಣವ ಸದೃಶರಾದ ಇವರಿಗೆ ಸರಯೂ ಸೇರ್ಪಡೆ.

ಈ ಸಂಗಮಕಾಲದಲ್ಲಿ ಚಿಂತೆಗೊಂದು ಚಿಕಿತ್ಸೆ ಎಂಬ ಪುಸ್ತಕವನ್ನು ನೀಡುವುದರ ಮೂಲಕ ತಮ್ಮ ವೈವಾಹಿಕ ಜೀವನದಲ್ಲಿ ಯಾವುದೇ ರೀತಿಯ ಚಿಂತೆ ಆವರಿಸದೇ ಇರಲಿ ಎಂದು ಶ್ರೀಮದ್ವಾದಿರಾಜರಲ್ಲಿ ಮೊರೆಹೊಂದಿದ್ದಾರೆ. ಈ ರೀತಿಯಾಗಿ

ಅದ್ವಿತೀಯರಾದ ವಿಜಯೀಂದ್ರ ಈಗ ಸದ್ವಿತೀಯರಾಗಿದ್ದಾರೆ.

ಇದರ ಆಂಗ್ಲಾನುವಾದವನ್ನು ಸರಯೂ ಇವರಿಂದ ಮಾಡಿಸಿದ್ದಾರೆ. ಈ ದಂಪತಿಗಳಿಂದ ಬಹಳಷ್ಟು ಕೃತಿಗಳು ಹೊರಬರಲಿ, ವೈವಾಹಿಕಜೀವನವು ಸುಖಕರವಾಗಲಿ, ಶುಭಪ್ರದವಾಗಲಿ ಎಂದು ಶ್ರೀಕೃಷ್ಣಮುಖ್ಯಪ್ರಾಣದೇವರಲ್ಲಿ ವಿಶೇಷವಾಗಿ ಪ್ರಾರ್ಥಿಸುತ್ತೇವೆ.

ಇತ್ಯನೇಕ ನಾರಾಯಣ ಸ್ಮರಣೆಗಳು

ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು

Rarest Archiver

श्री श्री विश्वप्रसन्नतीर्थश्रीपादाः
जगद्गुरु श्रीमन्मध्वाचार्यमूलमहासंस्थानम्
श्री अधोक्षजतीर्थपीठम् श्रीपेजावरमठः
उडुपि

ಅನುಗ್ರಹ ಸಂದೇಶ

ಚಿಂತೆಗೂ ಚಿತೆಗೂ ಅಂತರ ಶೂನ್ಯ. ಚಿತೆ ಹೆಣವನ್ನು ಸುಟ್ಟರೆ ಚಿಂತೆ ಜೀವಂತವ್ಯಕ್ತಿಯನ್ನೇ ಸುಡುತ್ತದೆ. ಈ ಚಿಂತೆ ಯಾರನ್ನೂ ಬಿಟ್ಟಿಲ್ಲ. 'ಅನುಗಾಲವೂ ಚಿಂತೆ ಈ ಜೀವಕೆ' ವಿಷಯ ಪದಾರ್ಥಗಳು ಸಿಕ್ಕರೂ ಚಿಂತೆ, ದಕ್ಕದೇ ಹೋದರೂ ಚಿಂತೆ, ಚಿಂತೆಯ ಫಲ ದುಃಖ, ತತ್ವಜ್ಞಾನಿಯಾದ ಸಾಧಕನಿಗೆ ಮಾತ್ರ ಚಿಂತೆಯ ಫಲ ಕಡಿಮೆ. ಹಾಗಾಗಿ ತತ್ವಜ್ಞಾನ ಹಾಗೂ ಸಾಧನೆಯೇ ಚಿಂತೆಯ ಫಲಕ್ಕೆ ಪರಿಹಾರದ ದಾರಿ.

ನಮ್ಮ ಆತ್ಮೀಯ ಶಿಷ್ಯರಾದ ಬೆ. ನಾ. ವಿಜಯೀಂದ್ರರು ಚಿಂತೆಗೊಂದು ಚಿಕಿತ್ಸೆಯನ್ನು ತಿಳಿಸುತ್ತಿದ್ದಾರೆ. ಅದನ್ನು ಪಡೆದರೆ ಶ್ರಮ ಸಾರ್ಥಕ. ಗೃಹಸ್ಥಜೀವನಕ್ಕೆ ಅಡಿ ಇಡುತ್ತಿರುವ ವಿಜಯೀಂದ್ರರ ಬಾಳು ಬೆಳಗಲಿ. ಅಲ್ಲೂ ಈ ಜ್ಞಾನಕಾರ್ಯ ನಿರಂತರವಾಗಿ ನಡೆಯಲಿ. ಶ್ರೀಕೃಷ್ಣಮುಖ್ಯಪ್ರಾಣರ ಅನುಗ್ರಹದ ಶ್ರೀರಕ್ಷೆ ಸದಾ ದೊರಕಲಿ.

ಸಹಧರ್ಮಿಣಿಯಾಗಿ ವಿಜಯೀಂದ್ರರ ಬದುಕನ್ನು ಪ್ರವೇಶಿಸುತ್ತಿರುವ 'ಸರಯೂ' ಅವರು, ವಿಜಯೀಂದ್ರರ ಈ ಲೇಖನವನ್ನು ಆಂಗ್ಲಭಾಷೆಗೆ ತರ್ಜುಮೆ ಮಾಡುವ ಮೂಲಕ ತನ್ನ ಸಹಧರ್ಮಿಣಿ ಪದವನ್ನು ಅನ್ವರ್ಥಗೊಳಿಸಿದ್ದಾರೆ.

ನಮ್ಮ ಪ್ರಿಯಶಿಷ್ಯ ವಿಜಯೀಂದ್ರರು ಇಂತಹ ಒಂದು ಅವಕಾಶವನ್ನು 'ಸರಯೂ' ಅವರಿಗೆ ಒದಗಿಸಿಕೊಟ್ಟು, ತನ್ನ ಸಹಧರ್ಮಿಣಿಯನ್ನಾಗಿ ಸ್ವೀಕರಿಸುವ ಮೂಲಕ 'ಧರ್ಮೇ ಚ ಅರ್ಥೇ ಚ ಕಾಮೇ ಚ ನಾತಿಚರಾಮಿ' ಎನ್ನುವ ಪ್ರತಿಜ್ಞೆಯನ್ನು ಕೃತಿಗಿಳಿಸಿ ಸಂಕಲ್ಪವನ್ನು ಜಗಜ್ಜಾಹೀರು ಮಾಡಿದ್ದಾರೆ.

Rarest Archiver

ತತ್ವಜ್ಞಾನಕಾರ್ಯದ ತೇರನ್ನೆಳೆಯಲು ನೊಗಕ್ಕೆ ತನ್ನ ಹೆಗಲನ್ನೊ ಒಡ್ಡಿದ 'ಸರಯೂ' ಅಭಿನಂದನಾರ್ಹರು. ಈ ದಂಪತಿಯಿಂದ ಶ್ರೀಮದಾಚಾರ್ಯರ ಸೇವೆ ನಿರಂತರ ನಡೆಯಲಿ. ಹರಿಗುರುಗಳು ಅನುಗ್ರಹಿಸಲಿ.

ಇಂತು ಸಪ್ರೇಮ ನಾರಾಯಣ ಸ್ಮರಣೆಗಳು.

ಶ್ರೀ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದರು

Rarest Archiver

ಶರಣಾಗತಿ

ಲೇಖಕರು
ಬೆ. ನಾ. ವಿಜಯೀಂದ್ರಾಚಾರ್ಯ
ಮೈಸೂರು

English Translation
V. SARAYU

ಶ್ರೀಹರಿವಾಯು ಪ್ರಕಾಶನ
ಮೈಸೂರು

Rarest Archiver

ಶ್ರೀಕೃಷ್ಣಸಂದೇಶ

- ❉ ದೇವರಲ್ಲಿ ಮನಸ್ಸಿಡು
- ❉ ದೇವರ ದಾಸನಾಗಿರು
- ❉ ದೇವರಿಗೇ ಸಕಲವನ್ನು ಸಮರ್ಪಿಸು
- ❉ ದೇವರನ್ನೇ ನಮಸ್ಕರಿಸು

ಶರಣಾಗತಿ

ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ ।

ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ ॥

(ಗೀ-೧೮-೬೬)

- ❉ ದೇವರನ್ನೇ ನಮಸ್ಕರಿಸು
- ❉ ಅವೈಷ್ಣವಧರ್ಮಗಳನ್ನು ಬಿಡು
- ❉ ನನ್ನೊಬ್ಬನನ್ನು ಶರಣಾಗು
- ❉ ನಿನ್ನ ಸಕಲಪಾಪಗಳನ್ನು ಪರಿಹರಿಸುವೆ
- ❉ ಬದುಕಿನ ಬವಣೆಗಳಿಗೆ ದುಃಖಿಸಬೇಡ

Rarest Archiver

ಶ್ರೀಭಾವೀಸಮೀರ
ಶ್ರೀಮದ್ವಾದಿರಾಜಗುರುಸಾರ್ವಭೌಮವಿರಚಿತ
ಅಭಯಸಂಸ್ತವ

ಶ್ರೀಗುರುಭ್ಯೋ ನಮಃ

ಹಯಚರಣ ಭಯ ಹರಣ

೧. ಶರಣಾಗತಿಯೊಂದೇ ಆಧಿಗೆ ಹಾದಿ

ಕಕುಲತೆಯ ಸಂಸಾರಕಾಂತಾರದಲ್ಲಿ ಸಿಲುಕಿದ ಪ್ರತಿಯೊಬ್ಬ ನರನು ಅನೇಕ ವಿಧವಾದ ಭಯಗಳಿಂದ ಬಂಧಿತನಾಗಿ ಚಿಕಿತ್ಸೆ ದೊರೆಯದೆ ಕಮರಿಹೋಗಿದ್ದಾನೆ. 'ಪ್ರಕೃತಿವಿಕೋಪದ ಭಯ' 'ದೈಹಿಕ ರೋಗದ ಭಯ', 'ಮಾನಸಿಕ ಚಿಂತೆಗಳಿಂದ ಭಯ', 'ನೀರಿನಲ್ಲಿ ಮೀಯವಾಗ ಸುಳಿಸೆಳೆಯುವ ಭಯ', 'ಆಕಾಶದಲ್ಲಿ ವಿಮಾನದಲ್ಲಿ ಸಂಚರಿಸುವಾಗ ಪತನದ ಭಯ', 'ಮನೆಯಲ್ಲಿ ಮಲಗಿದಾಗ ದರೋಡೆಕಾರರ ಭಯ', 'ಹೊರಗೆ ಸಂಚರಿಸುವಾಗ ವಾಹನದ ಭಯ', 'ಪುಸ್ತಕ ಹಿಡಿಯುವಾಗ ಅಜ್ಞಾನದ ಭಯ', 'ಪುಸ್ತಕಹಿಡಿಯದಿದ್ದಲ್ಲಿ ಸಂಸಾರದ ಭಯ', 'ಸತ್ಕರ್ಮದಲ್ಲಿ ತೊಡಗಿದಾಗ ಕರ್ಮಲೋಪದ ಭಯ', 'ದುಷ್ಕರ್ಮದಲ್ಲಿ ತೊಡಗಿದಾಗ ನರಕದ ಭಯ', 'ನಿತ್ಯವೂ ಸಾವಿನ ಭಯ', 'ಸತ್ತ ಬಳಿಕ ಗರ್ಭವಾಸದ ಭಯ', 'ಬಾಲ್ಯದಲ್ಲಿ ಬಹುಜನರಿಂದ ಭಯ', 'ಯೌವನದಲ್ಲಿ ಕಾಮಾದಿಗಳ ಭಯ', ' ದ್ವಂದ್ವದ ಭಯ', 'ಊಟದಲ್ಲಿ ಅಪಥ್ಯ-ಅಜೀರ್ಣಗಳ ಭಯ', 'ಜನರ ಒಡನಾಟದಲ್ಲಿ ಪಾಖಂಡಿಗಳ ಭಯ', 'ಕಲಿಕಾಲದ ಭಯ', 'ಇನ್ನೂ ರಾಕ್ಷಸ-ರುದ್ರ-ಪ್ರೇತ-ಯೋಗಿನಿ-ಪಿಶಾಚಿ-ಗ್ರಹ-ಉತ್ಪಾತ-ವಿಷಜಂತುಗಳು ಮುಂತಾದ ನೂರಾರು ಭಯಗಳಿವೆ. ಇಷ್ಟೆಲ್ಲ ಭಯಗಳಿಂದ ಬಿಡುಗಡೆ ಹೊಂದಲು ಯಾವ ಚಿಕಿತ್ಸಾಲಯಗಳೂ ಇಂದಿಗೂ ನಿರ್ಮಾಣವಾಗಿಲ್ಲ. ಇಂದು ನಿರ್ಮಾಣವಾದ ಚಿಕಿತ್ಸಾಲಯಗಳೆಲ್ಲವೂ ಭೂತಬಂಗಲೆಯಂತೆ ಭಯಕ್ಕೆ ಕಾರಣವಾಗಿವೆ. ಇಂದಿನ ಬಹುತೇಕ ವೈದ್ಯರೆಲ್ಲರೂ ಭೂಲೋಕದ ಮೃತ್ಯುದೂತರಂತಿದ್ದಾರೆ. ಆದ್ದರಿಂದಲೇ ಅನುಭವಿಗಳ ಉದ್ಗಾರವೊಂದು ಹೀಗಿದೆ -

ವೈದ್ಯರಾಜ ನಮಸ್ತುಭ್ಯಂ ಯಮರಾಜ ಸಹೋದರ ।
ಯಮಸ್ತು ಹರತಿ ಪ್ರಾಣಾನ್ ವೈದ್ಯಃ ಪ್ರಾಣಾನ್ ಧನಾನಿ ಚ ॥

Rarest Archive

'ಯಮರಾಜನ ಅಣ್ಣನಾದ ವೈದ್ಯರಾಜನೇ ನಿನಗೆ ಮೊದಲ ವಂದನೆ. ನಿನಗಿಂತಲೂ ನಮಗೆ ಯಮರಾಜನೇ ವಾಸಿ. ಏಕೆಂದರೆ ಯಮದೇವ ಜೀವರ ಪ್ರಾಣವನ್ನು ಮಾತ್ರ ಅಪಹರಿಸುತ್ತಾನೆ. ಆದರೆ ಈ ವೈದ್ಯರಾಜ ಮೊದಲು ಧನವನ್ನು ಅಪಹರಿಸಿ ನಂತರ ಪ್ರಾಣವನ್ನೂ ಅಪಹರಿಸುತ್ತಾನೆ' ಎಂದು. ಇಂದಿನ ಪ್ರಸಿದ್ಧ ಚಿಕಿತ್ಸಾಲಯಗಳನ್ನು ಕಂಡರೆ ಈ ಮಾತು ಅಕ್ಷರಶಃ ಸತ್ಯವೆನಿಸದಿರದು. ಆದ್ದರಿಂದ ಜೀವರ ಕಡಿವಾಣಕ್ಕೆ ಸಿಲುಕದ ನೂರಾರು ಭಯಗಳಿಗೆ ಚಿಕಿತ್ಸೆಯ ಉಪಾಯವೆಲ್ಲಿ? ಈ ಭಯಗಳಿಗೆ ಪರಿಹಾರ ಉಪಾಯಗಳು ಇಲ್ಲವೇ ? ಬದುಕಿನಲ್ಲಿ ಆಶಾವಾದಿಗಳಿಗೆ ಬದುಕಲು ಸಾಧ್ಯವೇ ಇಲ್ಲವೇ ? ಎಂಬ ಸಂಶಯಗಳಿಗೆ ಉತ್ತರವಾಗಿ ಸಕಲ ಭಯಗಳಿಗೆ ಶೀಘ್ರವಾಗಿ ಚಿಕಿತ್ಸೆ ನೀಡಲು ಪರಮಕಾರಿಣಿಕರಾದ ಶ್ರೀಮದ್ವಾದಿರಾಜಗುರುಸಾರ್ವಭೌಮರು ಅಭಯ ಸಂಸ್ತವವೆಂಬ ಅದ್ಭುತವಾದ ಸ್ತುತಿಯೊಂದನ್ನು ತಮ್ಮ ಅನುಭವದ ಹಿನ್ನೆಲೆಯಲ್ಲಿ ಉದ್ಗರಿಸಿರುವರು. ಸ್ತುತಿಯನ್ನು ಪಠಿಸಲು ಅರ್ಧ ನಿಮಿಷ ಸಾಕು. ಸಮಯ ಅಧಿಕಬೇಕಿಲ್ಲ. ಹಣದ ವಿನಿಯೋಗದ ಮಾತೇ ಇಲ್ಲ. ಎಷ್ಟು ಬಾರಿ ಹೃದಯದಲ್ಲಿ ಧರಿಸಿದರೂ ವಿಪರೀತ ಪರಿಣಾಮ ಎಂಬುದಿಲ್ಲ. ಸೇವಿಸುವ ಸಮಯದಲ್ಲಿ ಈ ಕೃತಿಗೆ ಬೇಕಾಗಿರುವುದೊಂದೇ ಶರಣಾಗತಿ. ಹರಿಭಕ್ತನಾಗಿ ಹರಿಪಾದದಲ್ಲಿ ವಿನಮ್ರನಾಗಿ ದೃಢವಿಶ್ವಾಸವನ್ನು ಶ್ರೀಹರಿಯಲ್ಲಿಟ್ಟು ಪಠಿಸಿದನಾದರೆ ಯಾವ ವಿಧದ ಭಯಕ್ಕೂ ಇದರಿಂದ ಚಿಕಿತ್ಸೆ ದೊರೆಯಬಲ್ಲುದು. ಏಕೆಂದರೆ ಭಗವಂತನ ಚರಣಕಮಲವನ್ನು ನಿರಂತರ ಉಪಾಸನೆ ಮಾಡುತ್ತಿದ್ದರೆ ನಮಗೆ ಯಾವ ರೀತಿಯಾದ ಭಯಗಳೂ ಬರಲು ಸಾಧ್ಯವೇ ಇಲ್ಲ. ಆದರೆ 'ಭಗವಂತನು ನಮಗೆ ಅಭಿಮುಖನಾಗಿ ಕುಳಿತು ನಮ್ಮನ್ನು ತಾಯಿಯಂತೆ ಕಾಣುತ್ತಿದ್ದಾನೆ.' ಎಂಬ ಅಚಲ ವಿಶ್ವಾಸಬೇಕು. ಈ ವಿಶ್ವಾಸವೇ ಶುದ್ಧವಾದ ಭಾಗವತ ಧರ್ಮ ಎನಿಸಿದೆ. ಈ ಧರ್ಮ ಬದುಕಿನ ಮರ್ಮ. ಇದನ್ನಳವಡಿಸಿಕೊಂಡರೆ ಆಪತ್ತಿನ ಭೀತಿಯೇ ಭಯದಿಂದ ಓಡುತ್ತದೆ.

ಒಂದು ವಿಸ್ತಾರವಾದ ವಿಶಾಲ ಮೈದಾನ ಇದೆ. ಎಲ್ಲಡೆಯೂ ಮರಳಿನ ರಾಶಿ. ಆ ಮೈದಾನದಲ್ಲಿ ಕಣ್ಣಿಗೊಂದು ಬಟ್ಟೆಕಟ್ಟಿಕೊಂಡು ಎಷ್ಟು ವೇಗವಾಗಿ ಓಡಿದರೂ ನಮಗೆ ಭಯಕ್ಕೆ ಅವಕಾಶವಿಲ್ಲ. ಮೈಗೆ ಪೆಟ್ಟು ತಗಲುವ ಸಂದರ್ಭವೇ ಇಲ್ಲ. ಹಿಂದೆ ಮುಂದಾಗಿ ಓಡಿ ಬಿದ್ದರೂ ಏನೂ ಆಗದು. ಎಲ್ಲೆಡೆಯೂ ಮರಳು ತುಂಬಿದ್ದರಿಂದ ಅಪಾಯಕ್ಕೆ ಅವಕಾಶವೇ ಇಲ್ಲ. ಅಂತೆಯೇ ವಿಶಾಲವಾದ

Rarest Archiver

ಮೈದಾನದಂತೆ ಗುಣಸಾಗರನಾದ ಶ್ರೀಹರಿ ಇದ್ದಾನೆ. ಅವನ ಪಾದಾವಲಂಬಿಗಳಾಗಿ ಅವನ ಮಾರ್ಗದರ್ಶನದಲ್ಲಿ ನಡೆದ ಸಾಧಕನು ಯಾವ ಆಪತ್ತಿಗೂ ಸಿಲುಕನು. ಅಮಂಗಲವಾದ ದೇಹ- ಇಂದ್ರಿಯಾದಿಗಳಲ್ಲಿರುವ ಅಧಿಕವಾದ ಮೋಹ ಜೀವನಿಗೆ ಉದ್ವೇಗ ಭಯಗಳನ್ನು ಹುಟ್ಟಿಸುತ್ತದೆ. ಇದಕ್ಕೆ ಸರಿಯಾದ ಚಿಕಿತ್ಸೆ ಎಂದರೆ ನಿತ್ಯವೂ ಅಹೇಯವಾದ ಹರಿಪಾದಚಿಂತನೆ. ಈ ಹರಿಪಾದಚಿಂತನೆಯೊಂದೇ ಸಕಲಭಯಗಳ ಚಿಂತೆಗೆ ಚಿಕಿತ್ಸೆಯಾಗಬಲ್ಲುದು.-

"ಮನ್ಯೇಽಕುತಶ್ಚಿದ್ಭಯಮಚ್ಯುತಸ್ಯ ಪಾದಾಂಬುಜೋಪಾಸನಮತ್ರ ನಿತ್ಯಮ್ I
ಉದ್ವಿಗ್ನಬುದ್ಧೇರಸದಾತ್ಮಭಾವಾದ್ ವಿಶ್ವಾತ್ಮನಾ ಯತ್ರ ನಿವರ್ತತೇ ಭೀಃ II"

(ಭಾ - ೧೨-೨-೩೩)

ಎಂಬ ಭಾಗವತದ 'ಕವಿ' ಎಂಬ ಜ್ಞಾನಿಗಳ ಅನುಭವದ ಉದ್ಗಾರವನ್ನು ರಾಜರು ಅನುಭವಿಸಿ ಹೇಳಿದ್ದಾರೆ -

ಯಸ್ಮಾನ್ಮಯಿ ದಯಾಲುಸ್ತ್ವಂ ಆಭಿಮುಖ್ಯಂ ಪುರಾಕಽರೋಃ I
ತಸ್ಮಾತ್ಕದಾಪಿ ಕುತ್ರಾಪಿ ಕುತೋಽಪಿ ನ ಭಯಂ ಮಮ II

'ದಯಾಳುವಾದ ಹಯವದನನು ನನಗೆ ಅಭಿಮುಖನಾಗಿ ಯಾವಾಗಲೂ ನನ್ನನ್ನು ಸಲಹುತ್ತಿರುವುದರಿಂದ ನನಗೆ ಯಾವ ಕಾಲದಲ್ಲಿಯೂ, ಯಾವುದೇ ದೇಶದಲ್ಲಿಯೂ, ಯಾವ ವಸ್ತುಗಳಿಂದಲೂ ಭಯ ಬಾರದು' ಎಂದು.

ಅಪರೋಕ್ಷಜ್ಞಾನಿಗಳಿಗೆ, ಭಗವಂತನು ನಿತ್ಯವೂ ಸಂರಕ್ಷಿಸುತ್ತಾನೆಂದು ಜ್ಞಾನವಿರುತ್ತದೆ. ವಾದಿರಾಜರು ಹಯಗ್ರೀವನ ವ್ಯಾಪಾರಗಳನ್ನು ಪ್ರತ್ಯಕ್ಷವಾಗಿ ಕಂಡವರು. ಕಲಿಯುಗದಲ್ಲಿ ಹರಿಸ್ಮರಣೆಯೂ ಬಾರದ ಮೌಢ್ಯ ನಮ್ಮಲ್ಲಿರುವಾಗ ಕಲಿಯುಗಕ್ಕೆ ಅಪವಾದವಾಗಿ ನಿಂತು ಹರಿಯನ್ನು ಶಿರದಲ್ಲಿಟ್ಟು ಕುಣಿದಾಡಿದ ರಾಜರ ಅನುಭಾವದ ಮಂತ್ರ ನಮಗೆಷ್ಟು ಅರ್ಥವಾದೀತು ? ಜೀವಾತ್ಮರಿಗೆಲ್ಲ ಹರಿಯು ಪರಮಮಿತ್ರನಾಗಿದ್ದಾನೆ. ಎಂದಿನಂತೆ ನಮ್ಮ ಅಸ್ತಿತ್ವವಿದೆಯೋ ಅಂದಿನಿಂದಲೂ ನಮ್ಮ ಹಿತೈಷಿಯಾಗಿ ನಮ್ಮೊಟ್ಟಿಗೇ ಇದ್ದಾನೆ. ನಮ್ಮ ಸಕಲಚೇಷ್ಟೆಗಳಿಗೆ ನೇತಾರನಾಗಿ ಬಿಂಬನಾಗಿ ಸದಾ ಸಲಹುತ್ತಿದ್ದಾನೆ. ಹೀಗಿದ್ದರೂ ನಮ್ಮ ಸಕಲಚೇಷ್ಟೆಗಳನ್ನು ಪ್ರವರ್ತಿಸುವವ ಹೃಷಿಕೇಶನೇ ಎನ್ನುವುದನ್ನು ತಿಳಿಯುವುದೇ ಇಲ್ಲ. ಇಂಗಿತಜ್ಞನಲ್ಲದ ಭೃತ್ಯನು ರಾಜನು ತೋರುವ ಪ್ರೀತಿಯನ್ನು ತಿಳಿಯದಿರುವಂತೆ ರಾಜಾಧಿರಾಜನಾದ ಶ್ರೀಹರಿಯ ಮೈತ್ರಿಯನ್ನು ಅಧಮನಾದ ಜೀವ ತಿಳಿಯಲಾರ. ಇಂತಹ

Rarest Archiver

ಪರಮೋಪಕಾರಿ ಯಾದ ಸರ್ವೇಶನಿಗೆ ನಮನ ಎನ್ನುತ್ತದೆ 'ಹಂಸಗುಹ್ಯಮಂತ್ರ'.

ನ ಯಸ್ಯ ಸಖ್ಯಂ ಪುರುಷೋ ವೇತ್ತಿ ಸಖ್ಯುಃ
ಸಖಾ ವಸನ್ ಸಂವಸತಃ ಪುರೇಽಸ್ಮಿನ್ ।
ಗುಣೋ ಯಥಾ ಗುಣಿನೋಽವ್ಯಕ್ತದೃಷ್ಟೇಃ
ತಸ್ಮೈ ಮಹೇಶಾಯ ನಮಸ್ಕರೋಮಿ ॥ (೯೬-೪-೨೪) ಎಂದು.

'ದೇವರು ಜೊತೆಗಿದ್ದಾನೆ ಎಂಬುದು ಕಣ್ಣಿಗೆ ಕಾಣುತ್ತಿಲ್ಲ', ಎಂದ ಮಾತ್ರಕ್ಕೆ ದೇವರ ಅಸ್ತಿತ್ವವನ್ನೇ ಅಲ್ಲಗಳೆಯುವುದು ಮೂರ್ಖತನವಾಗುತ್ತದೆ. ಜೀವನ ಇಚ್ಛಾಶಕ್ತಿಯೂ ಇಲ್ಲದ ಸ್ವಪ್ನವನ್ನು ಆ ದೇವನಲ್ಲದೆ ಯಾರು ಸೃಷ್ಟಿಸುತ್ತಾರೆ? ಜೀವನ ಅಲ್ಪತೆಗೆ ಅದ್ಭುತವಾದ ಸ್ವಪ್ನದ ದೃಷ್ಟಾಂತ ಸಾಲದೆ ? ಸ್ವಪ್ನದ ದೃಷ್ಟಾಂತದಿಂದ ಸಕಲಕ್ರಿಯೆಗಳಿಗೂ ನೇತಾರ ಶ್ರೀ ಹರಿಯೇ ಆಗಿದ್ದಾನೆಂದು ತಿಳಿಯಬಹುದಲ್ಲವೇ? ಈ ತಿಳಿವಿನ ಹಿನ್ನೆಲೆಯಲ್ಲಿ ಅಧಮನಾದ ಜೀವ; ಭಯಗ್ರಸ್ತನಾದ ಜೀವ, ಸರ್ವಾತ್ಮನಾದ ಹರಿಪಾದದಲ್ಲಿ ಶರಣುಹೊಂದಿದಲ್ಲಿ, ಅಲ್ಲಿರುವ ಸುಖವೇ ಬೇರೆ.

ಕೃಷ್ಣನು ಭಗವದ್ಗೀತೆಯಲ್ಲಿ ಇದನ್ನೇ ಹೇಳುತ್ತಾನೆ. ಎಲ್ಲ ಭಯಗಳಿಗಿಂತಲೂ ಅಧಿಕವಾದ ಭಯ ಸಂಸಾರದ ಭಯ. ಇದಕ್ಕೊಂದೇ ಉಪಾಯ - ಶ್ರೀಹರಿಯ ಅಭಯಪ್ರದವಾದ ಪಾದದಲ್ಲಿ ವಿಶ್ವಾಸ ಎಂದು -

ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ ।
ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ ।

(ಗೀ-೧೮-೬೬)

ಸಕಲ ಕರ್ಮಗಳ ಗುರಿ ; ಮನಸ್ಸನ್ನು ಶ್ರೀಹರಿಯಲ್ಲಿ ಏಕಾಗ್ರಗೊಳಿಸುವುದು. ಆದ್ದರಿಂದ ಮನಸ್ಸನ್ನು ಹರಿಯಲ್ಲಿ ಸಮರ್ಪಿಸುವ ಧರ್ಮದ ಮುಂದೆ ಇತರ ಬಾಹ್ಯ ಸತ್ಕರ್ಮಗಳು ಗೌಣವೆನಿಸುವವು. ಆದ್ದರಿಂದ ಶರಣಾಗತಿಧರ್ಮವನ್ನು ಪ್ರಧಾನವಾಗಿ ಅನುಸರಿಸು ಎಂಬ ಅರ್ಥದಲ್ಲಿ ಸರ್ವಧರ್ಮಗಳನ್ನು ಬಿಡು' ಎಂದಿದ್ದಾನೆ ಶ್ರೀಕೃಷ್ಣ. ಅಥವಾ 'ಸರ್ವಧರ್ಮಗಳ ಫಲಾಕಾಂಕ್ಷೆಯನ್ನು ಬಿಡು ಎಂದಾಗಲೀ, ಅವೈಷ್ಣವ ಧರ್ಮಗಳೆಲ್ಲವನ್ನೂ ಬಿಡು' ಎಂದಾಗಲೀ ಅರ್ಥೈಸಿಕೊಳ್ಳಬಹುದು. ಅಂತೂ ಸಕಲಭಯಗಳಿಂದ ಮುಕ್ತನಾಗಬಯಸುವ ಸಾಧಕನಿಗೆ ಶರಣಾಗತಿಗಿಂತ ಮಿಗಿಲಾದ ಚಿಕಿತ್ಸೆಯಿಲ್ಲ, ಎಂಬುದು ಶ್ರೀಕೃಷ್ಣನ ಭಾವ. ಎಷ್ಟು ದೇವರಪಾದದಲ್ಲಿ ದಾಸ್ಯಭಾವದ ಶರಣಾಗತಿಯನ್ನು ಹೊಂದುತ್ತೇವೆಯೋ ಅಷ್ಟು ಔನ್ನತ್ಯವನ್ನು ಸಾಧಿಸಬಹುದು.

Rarest Archiver

ಈ ಶರಣಾಗತಿಯ ಬಗ್ಗೆ ಶ್ರೀಮದಾಚಾರ್ಯರು ಅರ್ಥವಿವರಣೆ ನೀಡಿದ್ದಾರೆ -

ಸರ್ವೋತ್ತಮತ್ತ್ವ ವಿಜ್ಞಾನಪೂರ್ವಂ ತತ್ರ ಮನಃ ಸದಾ ।
ಸರ್ವಾಧಿಕಪ್ರೇಮಯುಕ್ತಂ ಸರ್ವಸ್ಯಾತ್ರ ಸಮರ್ಪಣಮ್ ॥
ಅಖಂಡಾ ತ್ರಿವಿಧಾ ಪೂಜಾ ತದ್ಭೃತ್ಯೈವ ಸ್ವಭಾವತಃ ।
ರಕ್ಷತೀತ್ಯೇವ ವಿಶ್ವಾಸಸ್ತದೀಯೋಽಹಮಿತಿ ಸ್ಮೃತಿಃ ।
ಶರಣಾಗತಿರೇಷಾ ಸ್ಯಾದ್ವಿಷ್ಣೌ ಮೋಕ್ಷಫಲಪ್ರದಾ ॥

ಹರಿಪಾರಮ್ಯದ ಹಿನ್ನೆಲೆಯಲ್ಲಿ ಸರ್ವವಸ್ತುಗಳಿಗಿಂತಲೂ ಅಧಿಕವಾದ ಪ್ರೀತಿ ಮಾಡುತ್ತಾ ಎಲ್ಲವನ್ನೂ ಅವನಿಗೆ ಸಮರ್ಪಿಸಬೇಕು. ಬಿಡದೆ ಮಾಡುವ ಮೂರು ವಿಧದ ಪೂಜೆ ಶರಣಾಗತಿ ಎನಿಸಿದೆ.

೧. ಸ್ವಾಭಾವಿಕವಾದ ಭಗವದ್ಭೃತಿ

೨. ಭಗವಂತನು ನನ್ನನ್ನು ರಕ್ಷಿಸಿಯೇ ತೀರುತ್ತಾನೆ ಎಂಬ ಚಿಂತನೆ

೩. ಭಗವಂತನಿಗೆ ಪ್ರೀತಿಪಾತ್ರನಾದ ದಾಸ ನಾನು ಎಂಬ ಚಿಂತನೆ ಮೋಕ್ಷಕ್ಕೆ ಕೊಂಡೊಯ್ಯುತ್ತದೆ.

ಈ ಶರಣಾಗತಿಯಿಂದ ಸಕಲ ದುರ್ಜನರ ಭಯವನ್ನು ತೊರೆದು ಮೆರೆಯಬಹುದೆಂದು ವೈಕುಂಠವರ್ಣನೆಯಲ್ಲಿ ರಾಜರು ದೃಷ್ಟಾಂತಪೂರ್ವಕವಾಗಿ ಪ್ರತಿಪಾದಿಸಿದ್ದಾರೆ.

ಇಳೆಗೆ ಇಟ್ಟ ಚೆಂಡು ಪುಟವೆದ್ದು ವ್ಯೋಮದ
ತಳಸೇರಿ ಒದಗಿ ಇಮ್ಮಡಿಸಿ
ಪೊಳೆವಂತೆ ವೈಷ್ಣವರು ಖಳರಿಗಳುಕದೆ ಹರಿಯ
ಒಲವಿಂದ ದಿನ ದಿನ ಹೆಚ್ಚುವರು (೪-೧೦೫)

'ನೆಲಕ್ಕೆ ಹೊಡೆದ ಚೆಂಡು ಪುಟಿದೆದ್ದು ಆಕಾಶದಲ್ಲಿ ಇಮ್ಮಡಿ ಎತ್ತರಕ್ಕೆ ಏರಿ ಶೋಭಿಸುವಂತೆ ಹರಿಪಾದದಲ್ಲಿ ದಾಸಾನುದಾಸ ಎಂದು ಬಿದ್ದ ವಿಷ್ಣುಭಕ್ತರು ದುಷ್ಟರಿಗೆ ಅಂಜದೆ ಹರಿಯ ಅನುಗ್ರಹದಿಂದ ದಿನ ದಿನ ಪ್ರವರ್ಧಮಾನರಾಗುವರು.'

ಆದ್ದರಿಂದ ಭಕ್ತರಾದವರು ಜೀವನದಲ್ಲಿ ಶ್ರೀಕೃಷ್ಣನು ಹೇಳಿದ ನಾಲ್ಕು ಅಂಶದ ಕಾರ್ಯಕ್ರಮವನ್ನು ಕಾರ್ಯರೂಪಕ್ಕೆ ತರಬೇಕು.

Rarest Archive

೧. ದೇವರಲ್ಲಿ ಮನಸ್ಸಿಡು
೨. ಎಂದೆಂದಿಗೂ ನನ್ನ ಭಕ್ತನಾಗಿರು
೩. ಎಲ್ಲವನ್ನೂ ನನಗೆ ಅರ್ಪಿಸು.
೪. ನನ್ನನ್ನೇ ನಮಸ್ಕರಿಸು.

'ಇಷ್ಟು ಅನುಷ್ಠಾನಕ್ಕೆ ತಂದಲ್ಲಿ ಖಂಡಿತವಾಗಿಯೂ ನನ್ನ ಪರಮಪದವನ್ನು ಹೊಂದುತ್ತೀ' ಎಂದು ಅರ್ಜುನನನ್ನು ನಿಮಿತ್ತಮಾಡಿಕೊಂಡು ಜಗತ್ತಿಗೆಲ್ಲ ಶರಣಾಗತಿಯ ಮಹತ್ವದ ಹಿನ್ನೆಲೆಯಲ್ಲಿ ಅಭಯವನ್ನು ಸಾರಿದ್ದಾನೆ. ಇದನ್ನೇ ರಾಜರು, 'ಕದಾಪಿ, ಕುತ್ರಾಪಿ, ಕುತೋಽಪಿ, ನ ಭಯಂ ಮಮ' ಎಂದಿದ್ದಾರೆ.

೨. ದೃಷ್ಟಿಯಿಂದಲೇ ಸ್ಥಾನ ಸೃಷ್ಟಿ

ಬ್ರಹ್ಮಾದಿ ದೇವತೆಗಳ ಸ್ಥಾನವನ್ನು ದೃಷ್ಟಿಯಿಂದಲೇ ಸೃಷ್ಟಿಸುವ ಶ್ರೀಹರಿಗೆ ನಮ್ಮಂತಹ ಮಂದಭಾಗ್ಯರ ಪ್ರಾರ್ಥನೆಯನ್ನು ನೆರವೇರಿಸುವುದೊಂದು ವಿಷಯವೇ. ಅವನ ಕರುಣಾದೃಷ್ಟಿಯು ಬ್ರಹ್ಮಾದಿಗಳಿಗೂ ಮೋಕ್ಷಾನಂದವೀಯಬಲ್ಲುದು. ಹೀಗಿರಲು ಅವನ ದಯೆಗೆ ಪಾತ್ರರಾದ ಪಾಮರರ ದೀನತೆ ಅವನಿಗೆಯಲ್ಲಿಯದು.

ಪ್ರತಿಯೊಬ್ಬ ಜೀವರೂ ತಾಯಿಯ ಗರ್ಭಾಂಬುಧಿಯಿಂದ ಹೊರಗೆ ಬಂದಾಗಿನಿಂದ ಆರಂಭಿಸಿ ಸಾಯುವ ತನಕವೂ ಬಗೆ ಬಗೆಯ ಅಪರಾಧಗಳನ್ನು ಮಾಡುತ್ತಲೇ ಇರುತ್ತಾರೆ. ಸಂಸಾರದ ಮೋಹದಲ್ಲಿ ತೇಲುವ ಜೀವರಿಗೆ ನಮ್ಮ ಹೊರ-ಒಳಗುಗಳನ್ನು ತಿಳಿಯುವ ಶ್ರೀಹರಿಯೊಬ್ಬ ಇದ್ದಾನೆಂಬುದೇ ಮರೆತುಹೋಗಿದೆ. ನಿತ್ಯವೂ ಅವನ ಕಣ್ಣೆದುರಿನಲ್ಲಿಯೇ ನಾಚಿಕೆ ಇಲ್ಲದೆ ನೂರಾರು ಅಪರಾಧಗಳನ್ನು ಆಚರಿಸುತ್ತಿರುತ್ತೇವೆ. ಮಗು ಒಂದು ಅಪರಾಧಮಾಡಿದರೂ ತಾಯಿ ಸಿಡಿಮಿಡಿಗೊಂಡು ಹೊಡೆಯಲನುವಾಗುತ್ತಾಳೆ. ಅನಂತ ಅಪರಾಧಗಳನ್ನು ಆಚರಿಸುತ್ತಿದ್ದರೂ ನಮ್ಮ ಅಶನ-ವಸನಗಳಿಗೆ ಚ್ಯುತಿ ತರದೆ ಸಿಟ್ಟೂ ಮಾಡದೆ ಪೊರೆಯುವ ಹರಿಯ ಅಪಾರ ಕರುಣೆಯ ಮಾತೃಹೃದಯಕ್ಕೆ ಯಾವ ತಾಯಿಯನ್ನು ದೃಷ್ಟಾಂತವನ್ನಾಗಿ ಕೊಡೋಣ? ಈ ಅಭಿಪ್ರಾಯದಲ್ಲಿಯೇ ರಾಜರು 'ಕ್ವ ದೈನ್ಯಂ ಕ್ವ ಚ ತೇ ದಯಾ' ಎಂದು ಉದ್ಗರಿಸಿದ್ದಾರೆ. ರಾಜರ ಈ ಉದ್ಗಾರ ಬ್ರಹ್ಮದೇವರ ಪ್ರಾರ್ಥನೆಗೆ ಹೋಲಿಕೆಯಾಗುತ್ತದೆ.

ಯಜ್ಜನ್ಮನಃ ಪ್ರಭೃತಿ ಮೋಹವಶಂ ಗತೇನ
ನಾನಾಪರಾಧಶತಮಾಚರಿತಂ ಮಯಾ ತೇ ।

Rarest Archive

ಅಂತರ್ಬಹಿಶ್ಚ ಸಕಲಂ ತವ ಪಶ್ಯತೋಽಪಿ
ಕ್ಷಂತುಂ ತ್ವಮರ್ಹಸಿ ಹರೇ ಕರುಣಾವಶೇನ ॥ (ಜಿತಂತೇ ಸ್ತೋತ್ರ)

ಭಗವಂತನ ಸಕಲಾವಯವಗಳೂ ಕರುಣೆಗೆ ತಾಣಗಳಾಗಿವೆ. ಪ್ರತಿಯೊಂದು ಅವಯವಗಳಿಂದಲೂ ಜಗತ್ತಿನ ಹಿತವನ್ನು ಬಯಸಿ ಸೃಷ್ಟಿಯನ್ನು ನೆರವೇರಿಸಿದ್ದಾನೆ. ಪುರುಷಸೂಕ್ತವೂ ಭಗವಂತನು ಸೃಜಿಸುವ ಬ್ರಹ್ಮಾಂಡದ ಚಿಂತನೆಯ ಜತೆಗೆ ಅವನ ಕಾರುಣ್ಯವನ್ನು ಸಾರುತ್ತದೆ. ಅದರ ಭಾವವನ್ನರಿತ ರಾಜರು 'ತ್ವದ್ದಯಾರ್ದ್ರದೃಶಾ ದೃಷ್ಟ್ವಾ ಬ್ರಹ್ಮಾದ್ಯಾಲೋಕಪಾಲತಾಮಗಮನ್' 'ಹರಿಯೇ! ನಿನ್ನ ದಯೆಯಿಂದ ಒದ್ದೆಯಾದ ನೋಟದಿಂದ ಕಾಣಲ್ಪಟ್ಟ ಬ್ರಹ್ಮಾದಿಗಳು ಲೋಕಪಾಲಕತ್ವಗುಣವನ್ನು ಹೊಂದಿದರು' ಎಂದು. ಹರಿಯ ಕರುಣೆಯ ಕಟಾಕ್ಷವೀಕ್ಷಣೆಯೇ ತ್ರ್ಯಕ್ಷಾದ್ಯಮರರಿಗೆ ಅಧ್ಯಕ್ಷಪದವಿಯನ್ನಿತ್ತಿತೆಂದ ಬಳಿಕ ಪಾಮರನರಗೆ ದೃಷ್ಟಿ ತ್ರ್ಯಕ್ಷಾದ್ಯಮರರಿಗೆ ಅಧ್ಯಕ್ಷಪದವಿನ್ನಿತ್ತಿತೆಂದ ಬಳಿಕ ಪಾಮರನರಗೆ ದೃಷ್ಟಿ ಸೋಂಕಿದರೂ ಬದುಕಿನ ಬವಣೆಗಳೆಲ್ಲವೂ ಪರಿಹಾರವಾಗುವವು.

ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರೂ ಹರಿಕರುಣೆಯ ಸವಿಯನ್ನು ಮೆಲುಕು ಹಾಕುತ್ತಾರೆ -

'ಸ್ಮರಾಮಿ ಭವಸಂತಾಪಹಾನಿದಾಮೃತಸಾಗರಂ
ಪೂರ್ಣಾನಂದಸ್ಯ ರಾಮಸ್ಯ ಸಾನುರಾಗವಲೋಕನಂ।' (ದ್ವಾದಶಸ್ತೋತ್ರ)

"ಭವದ ಬೇಗೆಯನ್ನು ಹಾನಿಗೈದ ಅಮೃತಸಾಗರದಂತಿರುವ ಪೂರ್ಣಾನಂದನಾದ ರಾಮನ ಪ್ರೇಮಾವಲೋಕನವನ್ನು ನೆನೆನೆನೆದು ಸಂತೋಷಿಸುತ್ತೇನೆ.' ಎನ್ನುತ್ತಾರೆ. ಜತೆಗೆ 'ಭ್ರೂಭಂಗಂ ಪಾರಮೇಷ್ಠ್ಯಾದಿಪದದಾಯಿ ವಿಮುಕ್ತಿದಮ್' 'ಹರಿಯ ಹುಬ್ಬಿನಕುಣಿತ ಬ್ರಹ್ಮಾದಿಗಳ ಸ್ಥಾನವನ್ನು ನಿರ್ಣಯಿಸುತ್ತದೆ' ಎಂದು ಕೊಂಡಾಡುತ್ತಾರೆ. ವೇದಗಳನ್ನು ಉದ್ಧರಿಸಿ ಬ್ರಹ್ಮಾದಿಗಳಿಗೆ ತತ್ತ್ವೋಪದೇಶ ನೀಡುವ ಮೂಲಕ ಜಗತ್ತಿನ ಕಣ್ಣೀರನ್ನೊರಸುವ ಶ್ರೀಹರಿಗೆ ಪಾಮರಮನುಜರ ದುಃಖ ಯಾವ ಲೆಕ್ಕ ? ಎಂಬ ಅಭಿಪ್ರಾಯದಲ್ಲಿ 'ದೈನ್ಯಂ ಕ್ವ?' 'ತೇ ದಯಾ ಕ್ವ' ಎಂದಿದ್ದಾರೆ. ಆದ್ದರಿಂದ ಇಷ್ಟೆಲ್ಲ ದಯಾಮಯನಾದ ನೀನು ಇಂದು ನನ್ನನ್ನು ಭವಭಯದಿಂದ ಉದ್ಧರಿಸು ಎಂಬುದು ಆಂತರ್ಯ. ಬ್ರಹ್ಮದೇವರ ಪ್ರಾರ್ಥನೆ ಇದಕ್ಕೆ ಸಂವಾದಿಯಾಗಿದೆ.

Rarest Archive

ಸ ತ್ವಂ ಪ್ರಸೀದ ಭಗವನ್ ಕುರು ಮಯ್ಯನಾಥೇ
ವಿಷ್ಣೋ ಕೃಪಾಂ ಪರಮಕಾರುಣಿಕಃ ಕಿಲ ತ್ವಮ್ ।
ಸಂಸಾರಸಾಗರನಿಮಗ್ನಮನಂತದೀನ-
ಮುದ್ಧರ್ತುಮರ್ಹಸಿ ಹರೇ ಪುರುಷೋತ್ತಮೋಽಸಿ ॥

'ಅನಾಥನಾದ ನನ್ನಲ್ಲಿ ಷಡ್ಗುನಿಧಿಯಾದ ವಿಷ್ಣುವೇ ! ಕರುಣೆ ತೋರು. ನೀನು ಪರಮಕಾರುಣಿಕನೆಂದು ಪ್ರಥಿತನಾಗಿದ್ದೀ. ಸಂಸಾರವೆಂಬ ವಿಷಮಯ ಜಲಧಿಯಲ್ಲಿ ಪೊಕ್ಕ ನನ್ನ ಬಳಿ ಅನಂತ ಗೋಳಾಟಗಳಿವೆ. ಪುರುಷೋತ್ತಮನಾದ ನೀನೊಬ್ಬನೇ ನನ್ನೆಲ್ಲ ಭಯಗಳನ್ನು ಪರಿಹರಿಸಲು ಸಮರ್ಥನಾಗಿದ್ದೀ. ಹರೇ! ಉದ್ಧರಿಸು.' ಎಂದು ಉದ್ಗರಿಸಿದ್ದಾರೆ.

ಇಷ್ಟು ಮಾತುಗಳಿಂದ ಭಗವದ್ಭಕ್ತರಾದವರಿಗೆ ಭಕ್ತಿ ಜಾಗೃತವಾಗಿ ಭಯದೂರವಾಗಬೇಕು. ಭಗವದ್ಭಕ್ತಿಗೆ ವಿಶ್ವಾಸ ದೃಢವಾಗಬೇಕು. ವಿಶ್ವಾಸ ದೃಢವಾಗಲು ಹರಿಪಾದ ನಂಬಿ ಅಭಯ ಪಡೆದವರನ್ನು ದೃಷ್ಟಾಂತವಾಗಿ ತೋರಿಸಬೇಕು. ಲೋಕದಲ್ಲಿಯೂ ಒಂದು ಜಡವಾದ ವಸ್ತು ಪಡೆದುಕೊಳ್ಳಬೇಕಾದರೆ ಹತ್ತಾರು ಬಾರಿ ವಿಚಾರಿಸಿ ಪಡೆದುಕೊಳ್ಳುತ್ತೇವೆ. ಹೀಗಿರಲು ಬದುಕನ್ನೇ ವಸ್ತುನಾಮಕನಾದ ಶ್ರೀಹರಿಗೆ ಸಮರ್ಪಿಸಬೇಕಾದರೆ ಜೀವರೂ ವಿಚಾರಮಾಡಿ ಪ್ರವೃತ್ತರಾಗಬೇಕು. ಕಂಡ ಕಂಡ ದೈವಗಳಿಗೆ ಸಮರ್ಪಿಸಭೇಕಾದರೆ ವಿಚಾರಮಾಡಿ ಹರಿಯಪಾದವನ್ನು ನೆನೆಯಬೇಕು ಎಂದು ತಿಳಿಸಲು ಹರಿಪಾದನಂಬಿದವರು ಇಂದು ಹೇಗೆ ಮೆರೆಯುತ್ತಿದ್ದಾರೆಂದು ಅನೇಕ ಸಾಕ್ಷಿಗಳನ್ನು ನೀಡುತ್ತಾರೆ.

೩. ಹನುಮಂತ ಸಾಕ್ಷಿ

ನಮ್ಮ ರಾಷ್ಟ್ರದ ದೇವ ಶ್ರೀ ರಾಮ. ಶ್ರೀ ರಾಮನು ಜಾತಿ, ಕುಲ, ಬಡವ, ದುಃಖಿತ, ದಲಿತ ಎಂಬುದನ್ನು ನೋಡದೆ, ಎಲ್ಲರ ಸದ್ಭಾವನೆಗಳಿಗೆ ಬೆಲೆಯನ್ನು ನೀಡಿ ಎಲ್ಲರನ್ನೂ ಸಲಹುವ ಔದಾರ್ಯವನ್ನು ತೋರಿದ್ದಾನೆ. ಸಮಸ್ತ ಪ್ರಜೆಗಳಿಗೆ ಮಾತ್ರವಲ್ಲದೆ ವನಚರಗಳಾದ ಎಲ್ಲ ವಿಧದ ಪ್ರಾಣಿ ಪಕ್ಷಿಗಳಿಗೂ ಆನಂದ ಅಭಯಗಳನ್ನು ಕೊಟ್ಟ ಏಕೈಕ ರಾಜ ಶ್ರೀರಾಮ. ಇಷ್ಟಕ್ಕೆ ತೃಪ್ತನಾಗದೆ ಪರಂಧಾಮಕ್ಕೆ ತೆರಳುವ ಸಮಯದಲ್ಲಿಯೂ ಎಲ್ಲ ವರ್ಗದವರನ್ನೂ ಮೋಕ್ಷಕ್ಕೆ ಬನ್ನಿರೆಂದು ಕೂಗಿ ಕರೆದ ಮಹಾನುಭಾವ ಶ್ರೀರಾಮ. 'ಅಭಯದಾನಮಾಡಿ ನಿತ್ಯಾನಂದ ನೀಡುವೆ' ಎಂದು ಡಂಗೂರ ಸಾರಿ ರಕ್ಷಿಸುವ ರಾಜರಿಂದೆಲ್ಲಿದ್ದಾರೆ?! ಪರಮಕಾರುಣಿಕನಾದ ಶ್ರೀರಾಮ

Rarest Archiver

ಇರುವೆ, ಕತ್ತೆ, ನಾಯಿಗಳಂತಹ ಪ್ರಾಣಿಗಳನ್ನೂ ಮೋಕ್ಷದ ನಿಚ್ಚಣಿಕೆಗೆ ಏರಿಸಿದ.

ಶ್ರೀರಾಮಚಂದ್ರನಿಗೆ ಸತ್ಕುಲ, ಬಹುಧನ, ಪಾಂಡಿತ್ಯ, ರೂಪ ಯಾವುದೂ ರುಚಿಸದು. ರಾಮನ ಭಂಟರಾದ ಕಪಿಗಳಿಗೆ ಇವುಗಳಲ್ಲಿ ಯಾವುದೂ ಇರಲಿಲ್ಲ. ಆದರೂ ಅವುಗಳ ಸಖ್ಯವನ್ನು ಬೆಳೆಸಿದ. ಶ್ರೀರಾಮನು ಭಕ್ತರಾದವರು ಯಾರೇ ಇರಲಿ ಅವರನ್ನು ಸ್ವೀಕರಿಸುತ್ತಾನೆ. ಸುರನೆ ಆಗಿರಲಿ, ಅಸುರನೇ ಆಗಿರಲಿ, ನರನಾದರೂ ಸರಿ, ವಾನರನಾದರೂ ಸರಿ, ಯಾರು ಸರ್ವಾತ್ಮನಾ ಹರಿಯನ್ನು ಭಜಿಸುತ್ತಾರೆಯೋ ಅವರನ್ನು ಮೇಲೆತ್ತುತ್ತಾನೆ. ಇವನ ಅಪಾರವಾದ ಕರುಣೆಯ ಬಲದಿಂದಲೇ ತೃಣ-ಮೃಗ-ಖಗಗಳೆಲ್ಲವೂ ಶ್ರೀರಾಮನ ಪರಂಧಾಮಯಾತ್ರೆಯಲ್ಲಿ ಪಯಣಿಗರಾದವು ಎನ್ನುತ್ತದೆ ಶ್ರೀಮದ್ಭಾಗವತ-

ನ ಜನ್ಮ ಮಾನಂ ಮಹತೋ ನ ಸೌಭಗಂ
ನ ವಾಙ್ ನ ಬುದ್ಧಿರ್ನಾಕೃತಿಸ್ತೋಷಹೇತುಃ ।
ತೈರ್ಯದ್ವಿಸೃಷ್ಟಾನಪಿ ನೋ ವನೌಕಸಃ
ಚಕಾರ ಸಖ್ಯೇ ಚ ಸ ಲಕ್ಷ್ಮಣಾಗ್ರಜಃ ॥ - (೫-೧೯-೭) ಎಂದು.

ಶ್ರೀರಾಮನ ಈ ಕರುಣೆ, ಅಭಯದಾನ ಅಂದಿಗೆ ಮುಗಿಯಲಿಲ್ಲ. 'ಯಸ್ಯಾಮಲಂ ನೃಪಸದಸ್ಸು ಯಶೋಽಧುನಾಪಿ ಗಾಯಂತಿ'ನಿರ್ಮಲವಾದ ರಾಮನ ಕೀರ್ತಿಯನ್ನು ಇಂದಿಗೂ ರಾಜಾಧಿರಾಜರು ಸಭೆಗಳಲ್ಲಿ ಮೆಲುಕುಹಾಕಿ ಮಾರ್ಗದರ್ಶನ ಪಡೆಯುತ್ತಿದ್ದಾರೆ ಎನ್ನುತ್ತದೆ ಶ್ರೀಮದ್ಭಾಗವತ. ಜತೆಗೆ ಶ್ರೀರಾಮನ ಕರುಣಾಕಟಾಕ್ಷ ಇಂದಿಗೂ ಭೂಮಂಡಲದ ಕಿಂಪುರುಷವರ್ಷದ ಖಂಡದಲ್ಲಿ ಶ್ರೀಹನುಮಂತನ ಮೇಲೆ ಹರಿದಿದೆ. ಶ್ರೀರಾಮನ ಕರುಣೆಯ ಕಡಲಲ್ಲಿ ಮುಳುಗಿದ ಹನುಮಂತನು ಇಂದಿಗೂ ರಾಮನನ್ನು ಅತಿಶಯವಾದ ಭಕ್ತಿಯಿಂದ ಸ್ಮರಿಸುತ್ತಲೇ ಇದ್ದಾನೆ. ಹನುಮಂತನ ಭಕ್ತಿಗೆ ಕಿಂಪುರುಷಖಂಡದ ಪರ್ವತಗಳೇ ಕರಗಿ ನೀರಾಗಿ ಹರಿಯುತ್ತಿವೆಯಂತೆ. ಹೀಗೆ ಭಕ್ತರಲ್ಲಿ ಅತಿಶಯವಾದ ಕಾರುಣ್ಯವನ್ನು ತೋರಿ ಅಭಯದಾನ ಮಾಡಿ ಪೊರೆಯುವ ಹರಿ ಇದ್ದಾಗ; ಇದಕ್ಕೆ ಸಾಕ್ಷಿಯಾಗಿ ಸಕಲಚೇತನರ ಕಿಂಪುರುಷವೆಂಬ ಶರೀರದಲ್ಲಿಯೇ ಹನುಮಂತನು ಸಾಕ್ಷಿಯಾಗಿರುವಾಗ ಭಯವೇಕೆ, ಭಯದ ಸ್ಮರಣೆಯಾದರೂ ಏಕೆ ?

೪. ವಿಭೀಷಣ ಸಾಕ್ಷಿ

ಲಂಕಾಧೀಶನಾದ ರಾವಣನ ಸ್ತ್ರೀಲೋಲುಪತೆಯನ್ನು ವಿಭೀಷಣನು ಪ್ರತಿಭಟಿಸಿದ. ನೀತಿವಂತನಾದ ವಿಭೀಷಣನು ರಾವಣನ ಅಕ್ರಮ ಅವ್ಯವಹಾರಗಳ

Rarest Archiver

ಬಗ್ಗೆ ಪ್ರತಿಭಟಿಸಿದ್ದೇ ತಡ ರಾವಣನು ಇವನ ವಿಷಯದಲ್ಲಿ ಕುಪಿತನಾದ. ರಾಜ್ಯದಿಂದ ಹೊರದೂಡಿದ. ಅಪ್ರಿಯವಾದ ಪಥ್ಯವನ್ನು ಹೇಳಹೋಗಿ ಸ್ವಯಂ ಭಯಕ್ಕೆ ತುತ್ತಾದ. ವಿಭೀಷಣನ ಜೀವನದಲ್ಲಿ ಮಾರ್ಗಗಳೆಲ್ಲವೂ ಮುಚ್ಚಿಹೋದಾಗ ಶತ್ರುವತ್ಸಲನಾದ ದಯಾಮಯನಾದ ಶ್ರೀರಾಮನ ಬಳಿ ಬಂದ 'ನಿನ್ನವನೆಂದು ಶರಣಾಗತನಾದ' ಈ ಪ್ರಸಂಗದಲ್ಲಿ ವಿಭೀಷಣನಿಗೆ ಅಭಯದಾನ ಮಾಡಲು ಯಾರೂ ಸಿದ್ಧರಿರಲಿಲ್ಲ. ಸಿದ್ಧನಿರುವ ರಾಮನನ್ನು ಅಭಯದಾನಮಾಡಬೇಡವೆಂದೇ ಅನೇಕರು ತಿಳಿಸಿದರು ಜಾಂಬವಂತ, ಸುಗ್ರೀವ, ನೀಲ, ಮೈಂದ, ಅಂಗದ, ತಾರ ಮುಂತಾದವರೆಲ್ಲರೂ ತಡೆದರು. ಶತ್ರುವಿನ ಗೃಹದಿಂದ ಬಂದ ಶತ್ರುವಿನ ಸಹೋದರನು ಸ್ವೀಕಾರಾರ್ಹನಾಗಲು ಹೇಗೆ ಸಾಧ್ಯ? ಎಂಬ ಪ್ರಶ್ನೆ ಇವರದ್ದಾಗಿತ್ತು. ಆದರೆ ಕರುಣಾಸಾಗರನಾದ ಶ್ರೀರಾಮಚಂದ್ರನು ಇವರ್‍ಯಾರ ಸಲಹೆಯನ್ನೂ ಸ್ವೀಕರಿಸದೆ ಭಕ್ತಾಗ್ರಣಿಯಾದ ಹನುಮಂತನ ಅಭಿಪ್ರಾಯವನ್ನು ಕೇಳಿದ. ಅವನ ಹೇಳಿಕೆಯೇ ರಾಮನ ನಿರ್ಣಯ. ಇಂತಹ ಪ್ರಸಂಗದಲ್ಲಿ ರಾಮನ ಅಂತರಂಗವನ್ನು ಅರಿತ ಹನುಮಂತನು ರಾಮನಂತಹ ಹೃದಯವೈಶಾಲ್ಯವನ್ನು ಹೊಂದಿ ಮಾತನಾಡುತ್ತಾನೆ-

ಗ್ರಾಹ್ಯ ಸ ಏಷ ನಿತರಾಂ ಶರಣಂ ಪ್ರಪನ್ನಃ
ಭಕ್ತಶ್ಚ ರಾಮಪದಯೋರ್ವಿನಶಿಷ್ಣುರಕ್ಷೋ
ವಿಜ್ಞಾಯ ರಾಜ್ಯಮುಪಭೋಕ್ತುಮಿಹಾಭಿಯಾತಃ

'ಸ್ವಾಮಿನ್! ಇವನು ನಿಜವಾಗಿಯೂ ಶರಣು ಬಂದಿದ್ದಾನೆ. ಖಂಡಿತವಾಗಿಯೂ ಸ್ವೀಕಾರಾರ್ಹನಾಗಿದ್ದಾನೆ. ಶ್ರೀರಾಮನ ಪಾದಗಳಲ್ಲಿ ಬಹಳ ಭಕ್ತನೂ ಆಗಿದ್ದಾನೆ. ರಾವಣನು ನಾಶವಾಗಲಿದ್ದಾನೆಂದು ಅರಿತು ರಾಜ್ಯವನ್ನು ಅನುಭವಿಸಲು ಇಲ್ಲಿಗೆ ಬಂದಿದ್ದಾನೆ. ಆದ್ದರಿಂದ ಇವನು ಸ್ವೀಕಾರಾರ್ಹ' ಎಂದ ಒಡನೆಯೇ ಶ್ರೀರಾಮನು ಹನುಮಂತನ ಮಾತನ್ನು ಸ್ವೀಕರಿಸಿ 'ಶರಣಾಗತನಾದ ಈತನನ್ನು ನಿಶ್ಚಯವಾಗಿಯೂ ಸ್ವೀಕರಿಸುತ್ತೇನೆ. ಇದು ನನ್ನ ಸಾರ್ವಕಾಲಿಕ ವ್ರತ' ಎನ್ನುತ್ತಾನೆ.

ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೇ ।
ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ ವ್ರತಂ ಮಮ ।

'ನನ್ನ ಬಳಿ ಬಂದು, 'ನಾನು ನಿನ್ನವ' ಎಂದು ಬೇಡುವವರು ಯಾರೇ ಇರಲಿ ಅವರೆಲ್ಲರಿಗೂ ಅಭಯದಾನ ಮಾಡುತ್ತೇನೆ. ಇದು ನನ್ನ ಸಾರ್ವಕಾಲಿಕ ವ್ರತ' ಎಂದು ಶ್ರೀರಾಮ ಪ್ರತಿಜ್ಞೆಗೈದಿದ್ದಾನೆ.

Rarest Archiver

ಇದಕ್ಕೆ ಸಾಕ್ಷಿಯಾಗಿ-ಇಂದಿಗೂ ವಿಭೀಷಣನು ಚಿರಂಜೀವಿಯಾಗಿ ಸುಖದಿಂದ ಬದುಕಿದ್ದಾನೆ. ಈ ಶರಣಾಗತಿ ಹೊಂದದ ರಾವಣಾದಿಗಳು ಹೇಳ ಹೆಸರಿಲ್ಲದವರಾಗಿದ್ದಾರೆ. ಶ್ರೀ ರಾಮನು ಮಾಡಿದ ನಿತ್ಯ ಅಭಯದ ಪ್ರತಿಜ್ಞೆಯನ್ನರಿತು ಅವನನ್ನೇ ನಂಬಿ ಧೈರ್ಯದಿಂದ ಬದುಕಬೇಕು. ಹೀಗೆ ವಿಭೀಷಣನ ಸಾಕ್ಷಿಯಿಂದ, ಎಲ್ಲೆಡೆಯೂ ಭಯದ ವಾತವರಣವೇ ಕಂಡು ಬಂದರೂ ಶ್ರೀಹರಿಯ ಪಾದತಳದಲ್ಲಿ ಎಂದೆಂದಿಗೂ ಅಭಯವಿದೆ ಎಂದು ನಂಬಿ ಬದುಕಬೇಕು.

೫. ದಿವಿ ಧ್ರುವಃ ಸಾಕ್ಷೀ

ಉತ್ತಾನಪಾದರಾಜನಿಗೆ ಈರ್ವರು ಪತ್ನಿಯರಿದ್ದರು. ಸುನೀತಿ, ಸುರುಚಿ ಎಂದು. ಉತ್ತಾನಪಾದನು ಸುರುಚಿಯ ಮೇಲಿನ ಮೋಹದಿಂದ ಸುನೀತಿಯನನ್ನು ಕಡೆಗಾಣಿಸಿದ್ದ. ಸುರುಚಿಯ ಯಾವುದೇ ಕಾರ್ಯಗಳನ್ನು ಪ್ರತಿಭಟಿಸುವ ಧೈರ್ಯ ರಾಜನಿಗಿರಲಿಲ್ಲ. ಈ ಸುರುಚಿಗೊಬ್ಬ ಉತ್ತಮನೆಂಬ ಮಗನಿದ್ದ. ಸುನೀತಿಗೆ ಧ್ರುವನೆಂಬ ಮಗನಿದ್ದ. ಒಂದು ದಿನ ಸುರುಚಿಯ ಮಗನಾದ ಉತ್ತಮ ಉತ್ತಾನಪಾದನ ತೊಡೆಯನ್ನೇರಿ ಕುಳಿತಿದ್ದ. ಇದನ್ನು ಕಂಡ ಧ್ರುವಕುಮಾರನಿಗೆ ತನ್ನ ತಂದೆಯ ತೊಡೆಯನ್ನೇರುವ ಮನಸ್ಸಾಯಿತು. ಕೂಡಲೆಂದು ಹೊರಟಾಗ ಸುರುಚಿ ತಡೆದು 'ರಾಜನ ತೊಡೆಯನ್ನೇರಬೇಕಾದರೆ ಕಾಡಿಗೆ ಹೋಗಿ ಹರಿಯನ್ನು ಧ್ಯಾನಿಸಿ ನನ್ನ ಹೊಟ್ಟೆಯಲ್ಲಿ ಹುಟ್ಟಿ ಬಾ !' ಎಂಬ ಕಠೋರವಾದ ಮಾತಿನಿಂದ ಚುಚ್ಚಿದಳು. ಮೃದುವಾದ ಧ್ರುವನ ಹೃದಯಕ್ಕೆ ಈಟಿಯಿಂದ ಮೀಟಿದಂತೆ ವಾಗ್ಬಾಣಗಳಿಂದ ಚುಚ್ಚಿದಳು. ಧ್ರುವನು ದುಃಖ ತಡೆಯಲಾರದೆ ತಾಯಿಯ ಬಳಿ ಅಳುತ್ತಾ ಬಂದು ತನ್ನ ದುಃಖವನ್ನು ತೋಡಿಕೊಂಡ. ಆದರೆ ಸುನೀತಿಯು ಯಾರನ್ನೂ ನಿಂದಿಸದೆ ಹರಿಧ್ಯಾನದ ಕಡೆಗೆ ಗಮನ ಸೆಳೆದಳು. ಕಾಡಿಗೆ ಹೋಗಿ ತಪಸ್ಸು ಮಾಡೆಂದು ೬ ವರ್ಷ ಪ್ರಾಯದ ಕಂದನಿಗೆ ಪ್ರೋತ್ಸಾಹವಿತ್ತಳು. ತಾಯಿಯ ಮಾತಿನಂತೆ ಧ್ರುವ ಕಾಡಿಗೆ ನಡೆದ. ನಾರದರ ಉಪದೇಶದಂತೆ ವಾಸುದೇವನ ಧ್ಯಾನಕ್ಕೆ ಅನುವಾದ. ಭಯಂಕರವಾದ ಅರಣ್ಯದಲ್ಲಿ ಧೃತಿಗೆಡದೆ ಹಿಂಸ್ರಮೃಗಗಳು, ವಿಷಜಂತುಗಳಿಂದ ತುಂಬಿದ ಭಯದ ವಾತಾವರಣದಲ್ಲಿಯೂ ಧ್ಯಾನನಿರತನಾದ. ಕಾಡಿನಲ್ಲಿ ಧ್ರುವನನ್ನು ಸಲಹುವ ಬಂಧುಗಳು ಯಾರೂ ಇಲ್ಲ. ಹೊತ್ತಿಗೆ ತುತ್ತೂ ಇಲ್ಲ. ನಿದ್ರೆಯೂ ಇಲ್ಲ. ಇಂತಹ ಪ್ರಸಂಗದಲ್ಲಿ ಧ್ರುವನ ಸಕಲಭಯಗಳನ್ನೂ ಪರಿಹರಿಸಿದವ ಭಯನಾಶಕನಾದ ಶ್ರೀಹರಿಯಲ್ಲದೆ ಮತ್ಯಾರು ?

Rarest Archiver

'ಕೃತಾಂಜಲಿಂ ಬ್ರಹ್ಮಮಯೇನ ಕಂಬುನಾ ಪಸ್ಪರ್ಶ ಬಾಲಂ ಕೃಪಯಾ ಕಪೋಲೇ'

ಕೈಮುಗಿದು ನಿಂತ ಧ್ರುವಕುಮಾರನ ಗಲ್ಲವನ್ನು ಶಂಖದಿಂದ ಕರುಣೆಯಿಂದ ಮುಟ್ಟಿದ. ಧ್ರುವಕುಮಾರನು ಹರಿಯನ್ನು ಬಗೆ ಬಗೆಯಾಗಿ ಸ್ತುತಿಸಿದ. ಬಳಿಕ ಧ್ರುವಕುಮಾರನಿಗೆ ಧ್ರುವಪದವಿಯನ್ನಿತ್ತ, ರಾಜ್ಯವನ್ನಿತ್ತ, ಮೋಕ್ಷಭಾಗಿಯಾಗುವಂತೆಯೂ ಅನುಗ್ರಹಿಸಿದ.

ನಮ್ಮ ಬದುಕಿನಲ್ಲಿಯೂ ಇಂತಹ ಅಪಮಾನಗಳು ಸಾಮಾನ್ಯ. ಅಪಮಾನವಾದಾಗ ಅದಕ್ಕೆ ಬೇಸರಗೊಳ್ಳದೆ ಭಗವಂತನ ಧ್ಯಾನದ ಕಡೆ ಗಮನಹರಿಸಬೇಕು. ಯಾರು ನಮ್ಮನ್ನು ಕಡೆಗಾಣಿಸಿದರೂ ಶ್ರೀಹರಿಯು ನಮ್ಮನ್ನು ಕೈಬಿಡನು.

ಹೀಗೆ ಅಭಯದಾನಕ್ಕಾಗಿ ಹನುಮಂತ, ವಿಭೀಷಣರ ದೃಷ್ಟಾಂತವನ್ನು ಕೊಟ್ಟು; ಭಗವಂತನ ಅಭಯದಾನಕ್ಕೆ ಪಾತ್ರರಾದವರು ಕೇವಲ ಭೂಲೋಕದಲ್ಲಿ ಮಾತ್ರವಲ್ಲ ಅಂತರಿಕ್ಷದಲ್ಲಿಯೂ ಇದ್ದಾರೆ. ಪಾತಾಳಲೋಕದಲ್ಲೂ ಇದ್ದಾರೆ, ಎಂದು ಎಲ್ಲ ಸ್ಥಳದಲ್ಲಿಯೂ ಹರಿಯೊಲುಮೆಗೆ ಪಾತ್ರರಾದವರನ್ನು ದೃಷ್ಟಾಂತವನ್ನಾಗಿ ರಾಜರು ತೋರಿಸುತ್ತಿದ್ದಾರೆ. ಭಗವಂತನಲ್ಲಿ ಭಕ್ತರಿಗೆ ವಿಶ್ವಾಸದೃಢವಾಗಲು ಈ ಧ್ರುವಕುಮಾರನ ದೃಷ್ಟಾಂತ ಇಂದಿಗೂ ಪ್ರತ್ಯಕ್ಷಗೋಚರವಾಗಿದೆ. ಎನ್ನುತ್ತಾರೆ. ಆಕಾಶಮಂಡಲದಲ್ಲಿ ಧ್ರುವನಕ್ಷತ್ರವನ್ನು ಪ್ರತ್ಯಕ್ಷವಾಗಿ ಕಾಣಬಹುದಾಗಿದೆ.

'ಶಿವೈಕಶರಣಾಃ ಬಾಣರಾವಣಾದ್ಯಾಃ ಕ್ವ ತೇ ಗತಾಃ
ಹರ್ಯೈಕಶರಣಾನ್ ಪಶ್ಯ ಪ್ರಹ್ಲಾದ ಧ್ರುವಪೂರ್ವಕಾನ್' ಎಂದು.

ಶಿವನನ್ನೇ ಶರಣು ಹೊಕ್ಕ ಹರಿದ್ವೇಷಿಗಳಾದ ಬಾಣಾಸುರ, ರಾವಣಾಸುರರು ಹೇಳ ಹೆಸರಿಲ್ಲದವರಾಗಿದ್ದಾರೆ. ಆದರೆ ನಮ್ಮ ಹರಿಯನ್ನೇ ಸರ್ವಾತ್ಮನಾ ಮೊರೆ ಹೊಕ್ಕ ಪ್ರಹ್ಲಾದ-ಧ್ರುವಕುಮಾರರನ್ನು ಇಂದಿಗೂ ಔನ್ನತ್ಯದ ಸ್ಥಾನದಲ್ಲಿ ನೋಡಬಹುದಾಗಿದೆ.

೬. ಸುತಳದಲ್ಲಿ ಬಲಿರಾಜ ಸಾಕ್ಷಿ

ಬಲಿಚಕ್ರವರ್ತಿಯು ಶುಕ್ರಾಚಾರ್ಯರ ಮೂಲಕ ವಿಶ್ವಜಿದ್‌ಯಾಗವನ್ನು ನಡೆಸಿ ಅತ್ಯಂತ ಬಲಿಷ್ಠನಾದ. ದೇವಪುರಿಗೆ ಲಗ್ಗೆ ಇಟ್ಟ. ದಿಟ್ಟ ದಾನವನ ಅಟ್ಟಹಾಸಕ್ಕೆ

Rarest Archiver

ದೇವತೆಗಳು ತಮ್ಮ ಲೋಕದಿಂದಲೇ ಕಾಲ್ಕಿತ್ತರು. ಅಮರಾವತಿಯ ಅರಸ ಬಲೀಂದ್ರನಾದ.

ಇತ್ತ ದೇವತೆಗಳು ಇಂತಹ ಆಪತ್ತಿನಲ್ಲಿ ಭಗವಂತನನ್ನೇ ಮೊರೆಹೊಕ್ಕರು. ಅವರ ಕ್ಷೇಮಕ್ಕಾಗಿ ಅದಿತಿಕಶ್ಯಪರಲ್ಲಿ ಎರಡನೇ ಬಾರಿ ಶ್ರೀಹರಿಯೇ ಮಗನಾಗಿ ಅವತರಿಸಿದ. ವಾಮನನಾಗಿ ನರ್ಮದೆಯ ತೀರಕ್ಕೆ ನಡೆದ. ಅಲ್ಲಿ ಬಲಿಚಕ್ರವರ್ತಿಯ ನೂರನೆಯ ವಿಶ್ವಜಿದ್ ಯಾಗ ನಡೆದಿತ್ತು. ಪುಟ್ಟವಾಮನ ಪೃಥಿವಿಯನ್ನೇ ಮಥಿಸುವಂತಹ ಪುಟ್ಟ ಹೆಜ್ಜೆಯನ್ನಿಡುತ್ತಾ ಯಜ್ಞವಾಟಕ್ಕೆ ಬಂದ.

ವಾಮನನ ದರ್ಶನದಿಂದ ಧನ್ಯನಾದ ಬಲಿ ತಾನಾಗಿಯೇ ಹೇಳಿದ - 'ಯದ್ ಯದ್ ವಟೋ ! ವಾಂಛಸಿ ತತ್ಪ್ರತೀಚ್ಛ' 'ಬೇಕಾದ್ದು ಕೇಳು' ಎಂದ. ವಾಮನ ಅದರಂತೆ ಮೂರುಪಾದಜಾಗ ಕೇಳಿದ. ಬಲಿ ನೀಡಿದ. ಅದನ್ನು ಪಡೆಯಲು ವಾಮನ ತ್ರಿವಿಕ್ರಮನಾಗಿ ಎರಡು ಪಾದಗಳಿಂದ ಸಮಸ್ತಲೋಕ ವ್ಯಾಪಿಸಿನಿಂತಾಗ, ಬಲಿ ಮೂರನೆ ಪಾದಕ್ಕೆ ತನ್ನನ್ನೇ ಸಮರ್ಪಿಸಿಕೊಳ್ಳಬೇಕಾಯಿತು. ಬಲಿಯು ಮೂರನೇ ಪಾದಕ್ಕೆ ಶರಣಾಗತನಾದ. ಹರಿಗೆ ಬೇಕಾದ್ದು ಇದೆ. ಇದರಿಂದ ಬಲಿಗೆ ಅಕ್ಷಯಫಲವನ್ನು ಕೊಡಲು ಅನುವಾದ. ತಾತ್ಕಾಲಿಕವಾಗಿ ಅವನಿಂದ ರಾಜ್ಯವನ್ನು ಕಸಿದು ದೇವೇಂದ್ರನಿಗೂ ಕೊಟ್ಟರೂ, ಮುಂದಿನ ದೇವೇಂದ್ರಪದವಿ ಬಲಿಚಕ್ರವರ್ತಿಗೆ ದೊರೆಯುವಂತೆ ಮಾಡಿದ. ಶರಣು ಬಂದವರಿಗೆ ಹರಿಕರುಣೆ ಇಲ್ಲಿಗೆ ಮುಗಿಯಲಿಲ್ಲ. ಬಲಿಚಕ್ರವರ್ತಿಗೆ ಸುತಲ ಲೋಕದ ಆಧಿಪತ್ಯವನ್ನೂ ನೀಡಿದ. ಜೊತೆಗೆ ಸುತಲಲೋಕದ ದ್ವಾರಪಾಲಕನಾಗಿ ತಾನೇ ನಿಲ್ಲುವೆನೆಂದು ಪ್ರತಿಜ್ಞೆಗೈದ. ಹೆದರಿ ಕಂಗಾಲಾದ ಬಲಿಗೆ ಭಗವಂತನ ಇಂತಹ ಅಭಯದಾನವನ್ನು ಊಹಿಸಲೂ ಸಾಧ್ಯವಾಗಲಿಲ್ಲ. ಇಂದಿಗೂ ಬಲಿಯ ದ್ವಾರದಲ್ಲಿ ಹರಿ ನಿಂತಿದ್ದಾನೆ. ಹರಿಯ ಈ ಅಪರಂಪಾರವಾದ ಕರುಣೆಯನ್ನು ಕಂಡೇ ದಾಸರು ಹೀಗೆ ಉದ್ಗರಿಸಿದರು -

'ಹೂವ ತರುವರ ಮನೆಗೆ ಹುಲ್ಲ ತರುವ
ಆವ ಲಕುಮೀರಮಣ ಇವನಿಗಿಲ್ಲ ಗರುವ' ಎಂದು.

ಭಗವಂತನು ಮಾಡಿದ ಅಭಯದಾನಕ್ಕೆ ಬಲಿಯು ಇಂದಿಗೂ ಸುತಲದಲ್ಲಿ ಸಾಕ್ಷಿಯಾಗಿ ಭಕ್ತಿಯ ಕಣ್ಣೀರುಖೋಡಿಯಲ್ಲಿ ತೊಯ್ದು ಅಧಮರ್ಣನಾಗಿ ಧನ್ಯತೆಯ ಕಣ್ಣಾಲಿಗಳಿಂದ ಹರಿಯನ್ನು ಪೂಜಿಸುತ್ತಿದ್ದಾನೆ.

Rarest Archive

ಇದನ್ನೆ ರಾಜರು 'ಯದ್ವಾರ್ಯದ್ಯಾಪಿ ವರ್ತತೇ' ಇಂದಿಗೂ ದ್ವಾರದಲ್ಲಿ ಹರಿನಿಂತು ಬಲಿಯನ್ನು ರಕ್ಷಿಸುತ್ತಿದ್ದಾನೆ ಎನ್ನುವ ಮೂಲಕ ಅಭಯಪ್ರಾಪ್ತಿಗಾಗಿ ಹರಿಯನ್ನೇ ಭಜಿಸು ಎಂದು ಸೂಚಿಸಿದ್ದಾರೆ.

೭. ಕರುಣೆಗೆ ಧರಣೀದೇವಿ ಸಾಕ್ಷಿ

ಸ್ವಾಯಂಭುವ ಮನ್ವಂತರದಲ್ಲಿ ಲಕ್ಷಯೋಜನ ದಪ್ಪ ಏಳು ಕೋಟಿ ಯೋಜನ ವಿಸ್ತಾರವಾದ ಭೂಮಿಯು; ಐವತ್ತು ಕೋಟಿ ಯೋಜನವಿಸ್ತಾರ, ಇಪ್ಪತ್ತೈದು ಕೋಟಿ ಯೋಜನ ಆಳವಾದ ಘನೋದಕದಲ್ಲಿ ತನ್ನ ಭಾರದಿಂದ ತಾನೇ ಮುಳುಗಿಹೋಯಿತು. ಆ ಸಂದರ್ಭದಲ್ಲಿ ಶ್ರೀಹರಿಯು ಕರುಣೆಯಿಂದ ಎತ್ತಲು ಹೊರಟ. ಆವಾಗ ಬ್ರಹ್ಮಪುತ್ರನಾದ ಆದಿಹಿರಣ್ಯಾಕ್ಷನು ಎತ್ತದಂತೆ ತಡೆಯಲು ಯತ್ನಿಸಿದ. ಅವನನ್ನು ಶ್ವೇತವರಾಹರೂಪಿಯಾದ ಹರಿಯು ತನ್ನ ಕೋರೆ ದಾಡೆಗಳಿಂದ ಸೀಳಿ ಸಂಹರಿಸಿದ. ಈ ಮೂಲಕ ಭೂಮಿಯ ಭಯವನ್ನು ಪರಿಹರಿಸಿದ.

ಎರಡನೆಯ ಬಾರಿ ಪುನಃ ಭೂದೇವಿಯನ್ನು ಅಪಹರಿಸಿ ದಿತಿಪುತ್ರನಾದ ಹಿರಣಾಕ್ಷ ಘನೋದಕದಲ್ಲಿ ಮುಳುಗಿಸಿದ. ಭೂದೇವಿಯು ಭಯದಿಂದ ಪುನಃ ದುಃಖಿತಳಾದಾಗ ಅವಳನ್ನು ಅನುಗ್ರಹಿಸಲು ನೀಲವರಾಹನಾದ ಹರಿಯು ಪುನಃ ಹೊರಟಾಗ ವಿಜಯಾವಿಷ್ಟನಾದ ಹಿರಣ್ಯಾಕ್ಷ ತಡೆಯಲು ಬಂದ. ಆ ಹಿರಣಾಕ್ಷ್ಯನನ್ನು ಕರ್ಣಮೂಲದಲ್ಲಿ ಕೈಯಿಂದ ಹೊಡೆದು ಸಂಹರಿಸಿದ. ಹೀಗೆ ಭೂದೇವಿಗೆ ಘನೋದಕದಲ್ಲಿ ಬಂದ ಆಪತ್ತನ್ನೂ ಶ್ರೀಹರಿಯು ಪರಿಹರಿಸಿರುವಾಗ, ಭಕ್ತಿಯಿಂದ ಸ್ತುತಿಸಲು ನಮ್ಮ ಆಪತ್ತನ್ನು ಪರಿಹರಿಸನೇ ?

೮. ಅಪೌರುಷೇಯ ವೇದಗಳು ಸಾಕ್ಷಿ

ಹಯಗ್ರೀವರೂಪಿ ಭಗವಂತನ ಕೈಯಲ್ಲಿರುವ ವೇದಗ್ರಂಥವನ್ನು ಹರಿಕರುಣೆಗೆ ದೃಷ್ಟಾಂತವನ್ನಾಗಿ ಹೇಳುತ್ತಿದ್ದಾರೆ.

ಸೃಷ್ಟಿಯ ಆರಂಭದಲ್ಲಿ ಹಯಗ್ರೀವನೆಂಬ ಅಸುರನು ಅಪೌರುಷೇಯ ವೇದಗಳನ್ನು ಅಪಹರಿಸಿದನು. (ವೇದದ ಅಪಹರಣವೆಂದರೆ ವೇದಾಭಿಮಾನಿಗಳ ಅಪಹರಣವೆಂದರ್ಥ.) ಇದರಿಂದ ಭಯಗೊಂಡ ವೇದಾಭಿಮಾನಿಗಳ ಸಂರಕ್ಷಣೆ ಬೇರೆ ಯಾರಿಂದಲೂ ಸಾಧ್ಯವಿಲ್ಲವೆಂದು ಹಯಗ್ರೀವರೂಪಿಯಾದ ಶ್ರೀಹರಿಯು ಅಸುರನನ್ನು ಸಂಹರಿಸಿ ವೇದಗಳನ್ನು ಉದ್ಧರಿಸಿದ.

Rarest Archiver

ಹೀಗೆಯೇ ಮತ್ಸ್ಯಾವತಾರದಲ್ಲಿಯೂ ಶ್ರೀಹರಿಯು ವೇದಗಳನ್ನು ಉದ್ಧರಿಸಿದ್ದಾನೆನ್ನುತ್ತದೆ ಶ್ರೀಮದ್ಭಾಗವತ -

'ಮುಖತೋ ನಿಸ್ಸೃತಾನ್ ವೇದಾನ್ ಹಯಗ್ರೀವೋಽತಿಕೇಽಹರತ್
ಜ್ಞಾತ್ವಾ ತದ್ ದಾನವೇಂದ್ರಸ್ಯ ಹಯಗ್ರೀವಸ್ಯ ಚೇಷ್ಟಿತಮ್
ದಧಾರ ಶಫರೀರೂಪಂ ಭಗವಾನ್ ಹರಿರೀಶ್ವರಃ' - (೮-೨೪-೯)

ಹೀಗೆ ಆವಾಗಾವಾಗ ನಡೆದ ಸಜ್ಜನರ ಭಯದ ವಾತಾವರಣವನ್ನು ತಿಳಿಗೊಳಿಸಿದ ಕೀರ್ತಿ ಭಗವಂತನಿಗೆ ಸಲ್ಲುವಂತಹುದು.

೯. ಮಂದರಗಿರಿಯು ಸಾಕ್ಷಿ

ದೇವದೈತ್ಯರ ಸಂಗ್ರಾಮದಲ್ಲಿ ದೇವತೆಗಳು ಪರಾಜಿತರಾಗಿ ಹರಿಯನ್ನು ಮೊರೆಹೊಕ್ಕರು. ಶ್ರೀ ಹರಿಯ ಸಮುದ್ರಮಥನಕ್ಕೆ ಪ್ರೇರಣೆಮಾಡಿದ. ಅದರಂತೆ ದೇವತೆಗಳು ಮಥನಕ್ಕಾಗಿ ಮಂದರಗಿರಿಯನ್ನೇ ಕಿತ್ತು ತರುವ ಸಂಕಲ್ಪಮಾಡಿದರು. ಆದರೆ ಅದನ್ನು ಕಿತ್ತುವುದು ಅಷ್ಟು ಸುಲಭವಲ್ಲ. ಮಂದರಾಚಲವು ರುದ್ರದೇವರು ವರಬಲದಿಂದ ಅಚಲವಾಗಿತ್ತು. ಆದರೆ ಚಲನೆಗೆ ಜಗತ್ಪಾಲಕನಾದ ಹರಿಯೇ ಸಮರ್ಥನೆಂದು ಹರಿಯನ್ನು ಬೇಡಿದರು. ಶ್ರೀಹರಿಯು ಕರುಣೆಯಿಂದ ಮಂದರಗಿರಿಯನ್ನೆತ್ತಿ ಗರುಡನ ಮೇಲಿಟ್ಟ. ಭಗವಂತನು ಅನಾಯಾಸವಾಗಿ ಕಿತ್ತಿಟ್ಟಿದ್ದನ್ನು ಕಂಡ ದೇವತೆಗಳಿಗೆ 'ಇದೇನು ಮಹಾ ಕೆಲಸ?' ಎಂಬ ಗರ್ವ ಬಂತು. ಹೊತ್ತು ತರುವ ದಾರಿಯಲ್ಲಿ ದೇವತೆಗಳು ಪರ್ವತ ಎತ್ತುವ ಚಾಪಲ್ಯವನ್ನು ವ್ಯಕ್ತಪಡಿಸಿದರು. ಆಗಲೆಂದು ಸ್ವಲ್ಪ ಭಾರವನ್ನು ದೇವತೆಗಳ ಕೈಯಲ್ಲಿಟ್ಟದ್ದೆ ತಡ ದೇವತೆಗಳು ಚೀರಿಕೊಂಡರು. ಪರ್ವತದ ಒಂದು ಭಾಗವನ್ನೂ ಹೊರಲಾರದೆ ದೇವತೆಗಳು ಅಸುರರೂ ಸೇರಿದಂತೆ ಎಲ್ಲರೂ ಕೈಕಾಲುಗಳನ್ನು ಮುರಿದುಕೊಂಡರು. ಈ ಪ್ರಸಂಗವನ್ನು ರಾಜರು 'ದೇವಾಶ್ಚಾಧ್ವನಿ ಚೂರ್ಣಿತಾಃ' ಎಂದಿದ್ದಾರೆ.

ಸಮುದ್ರಮಥಿಸಿ ಅಮೃತಕುಡಿಯುವುದಿರಲಿ, ಕಡೆಗೋಲಿನ ಒಂದು ಭಾಗದ ಭಾರವನ್ನೇ ಸಹಿಸಲಾರದೆ ದಾರಿಯಲ್ಲೇ ಕೈಕಾಲು ಮುರಿದುಕೊಂಡರು. ಹೀಗಿರಲು ದೇವತೆಗಳು ಸಹಜಪರಾಕ್ರಮದಿಂದ ಅಮೃತಕುಡಿಯಬಲ್ಲರೇ? ದೇವತೆಗಳಿಗೇ ಇಂತಹ ಸ್ಥಿತಿ ಒದಗಿರಲು ಹುಲುಮಾನವನ ಪಾಡೇನು ?

Rarest Archiver

ಇಷ್ಟೆಲ್ಲ ದೇವತೆಗಳು ಪಟ್ಟ ಕಷ್ಟ ಭಯಗಳನ್ನು ಪ್ರತ್ಯಕ್ಷನಾಗಿ ಕಂಡವ ಮಂದರ. ಸಮುದ್ರಮಥನದ ಪ್ರತಿಯೊಂದು ಘಟ್ಟದಲ್ಲಿ ಬಂದು ಆಪತ್ತನ್ನು ದಾಟಲು ದೇವರ ಕರುಣೆಯ ಹೊರತಾಗಿ ಬೇರೆ ಯಾವ ಉಪಾಯಗಳೂ ಇರಲಿಲ್ಲ. ಕೇವಲ ಹರಿಕರುಣೆಯಿಂದ ದೇವತೆಗಳಿಗೆ ಅಮೃತ ದೊರೆಯಿತು. ಇದನ್ನು ಪ್ರತ್ಯಕ್ಷವಾಗಿ ಕಂಡವ ಮಂದರಗಿರಿ. ಆದ್ದರಿಂದ ಪರ್ವತವನ್ನು ದೃಷ್ಟಾಂತವನ್ನಾಗಿ ಕೊಟ್ಟಿದ್ದಾರೆ.

ವಾದಿರಾಜರು ಹರಿಯು ಅಭಯದಾನ ಮಾಡುತ್ತಾನೆ ಎನ್ನಲು ಪರ್ವತ, ನಕ್ಷತ್ರ, ಪುಸ್ತಕ, ಪ್ರಾಣಿ, ದಾನವ, ಮಾನವ, ದೇವತೆ, ಸ್ತ್ರೀ, ಚಕ್ರವರ್ತಿ, ಬಾಲಕ, ವೃದ್ಧ, ಹೀಗೆ ಎಲ್ಲಾ ರೀತಿಯ ವಸ್ತುಗಳನ್ನು ದೃಷ್ಟಾಂತವನ್ನಾಗಿ ತೋರಿಸಿ 'ಹಯಚರಣ ಭವಹರಣ' ಎಂಬ ವ್ಯಾಪ್ತಿಯನ್ನು ನಿರ್ಣಯಿಸಿದ್ದಾರೆ.

ಅಮೃತಪ್ರಾಪ್ತಿಗೆ ಹರಿಪಾದಕಮಲದ ಧೂಳಿನ ಕಣಗಳೂ ಸಾಕ್ಷಿಯಾಗಿವೆ ಎನ್ನುತ್ತದೆ ಶ್ರೀಮದ್ಭಾಗವತ -

ಏವಂ ಸುರಾಸುರಗಣಾಃ ಸಮದೇಶಕಾಲ
ಹೇತ್ವರ್ಥಕರ್ಮಮತಯೋऽಪಿ ಫಲೇ ವಿಕಲ್ಪಾಃ ।
ತತ್ರಾಮೃತಂ ಸುರಗಣಾಃ ಫಲಮಂಜಸಾऽऽಪುಃ
ಯತ್ಪಾದಪಂಕಜರಜಃ ಶ್ರಯಣಾನ್ನ ದೈತ್ಯಾಃ ॥ (೮-೯-೨೮)

ಸಮುದ್ರಮಥನದಲ್ಲಿ ದೇವತೆಗಳೂ ಶ್ರಮವಹಿಸಿದ್ದಾರೆ. ದೈತ್ಯರೂ ದುಡಿದಿದ್ದಾರೆ. ಆದರೆ ಅದರ ಫಲವನ್ನು ದೇವತೆಗಳು ಮಾತ್ರ ಹೊಂದಿದ್ದಾರೆ. ಇಬ್ಬರಿಗೂ ಸಾಮಾನವಾದ ದೇಶ, ಕಾಲ, ಕರ್ಮ, ಉದ್ದೇಶ, ಸಾಧನಗಳಿದ್ದವು. ಹೀಗಿದ್ದರೂ ದೇವತೆಗಳಿಗೆ ಅಮೃತದೊರೆಯಲು ಹರಿಪಾದದ ರಜೋರಾಗಿಗಳಾಗಿದ್ದುದೇ ಕಾರಣವಾಯಿತು. ಹರಿಯ ಭಕ್ತಿ, ಜ್ಞಾನ, ಸಾತ್ವಿಕತನಗಳಿಂದ ಭಯಮುಕ್ತರಾದರು. ದೈತ್ಯರು ಶ್ರಮಪಟ್ಟಿದ್ದರೂ ಅವರಲ್ಲಿ ಇಂತಹ ಸದ್ಗುಣಲವಲೇಶವೂ ಇರಲಿಲ್ಲ. ಸ್ವಾರ್ಥ - ಭೋಗ - ಅಧಿಕಾರ - ದರ್ಪಗಳಿಂದ ಕಂಟಕಪ್ರಾಯರಾಗಿದ್ದರು.

ಈ ಪ್ರಸಂಗದಿಂದ ನಾವೂ ಕಲಿಯಬೇಕಾದ ಪಾಠ ಬಹಳಷ್ಟಿದೆ. ಏನೇ ಕಾರ್ಯಗಳನ್ನು ನಾವು ಮಾಡಿದರೂ ಈ ಕಾರ್ಯಕ್ಕಿಂತ ಅದರ ಹಿಂದಿರುವ ಭಾವನೆಯೇ ಮುಖ್ಯವಾಗಿದೆ. ಸ್ವಾರ್ಥ, ಅಧಿಕಾರ, ಆಸೆಗಳಿಗೆ ಬಲಿಯಾಗಿ ಏನೆಲ್ಲ

Rarest Archive

ಮಾಡಿದರೂ ಅವೆಲ್ಲವೂ ವ್ಯರ್ಥವೇ ಸರಿ. ಭಕ್ತಿ ಇಲ್ಲದ ಅನುಷ್ಠಾನ ಕೇವಲ ಡಾಂಬಿಕತನದ ಪ್ರದರ್ಶನ. ಭಗವದ್ಭಕ್ತಿ ಸೇರಿದಾಗ ಮಾತ್ರ ಸಕಲಕರ್ಮಗಳೂ ಫಲಪ್ರದಗಳಾಗುತ್ತವೆ. ನಿರ್ಭಯತೆಗೆ ಹೇತು ಆಗುತ್ತವೆ. ಪುರುಷಾರ್ಥಭಾಕ್ ಎನಿಸುತ್ತವೆ.

೧೦. ಮಹದೇವನು ಸಾಕ್ಷಿ

ಭಸ್ಮದೈತ್ಯನಿಂದ ಬಂದ ರುದ್ರನ ಆಪತ್ತನ್ನು ಪರಿಹರಿಸಿದವ ಶ್ರೀಹರಿ. ಇದಕ್ಕೆ ಮಹದೇವನೇ ಸಾಕ್ಷಿ ಎಂದಿದ್ದಾರೆ. ಇಲ್ಲಿ 'ಭಸ್ಮದೈತ್ಯ' ಎಂದರೆ ಭಸ್ಮಾಸುರನೆಂದು ಪ್ರಸಿದ್ಧ. ರುದ್ರನು ಇವನಿಗೆ ವರಕೊಟ್ಟು ತಾನೇ ಮುಳುವಿಗೆ ತುತ್ತಾದ. ಭಯದಿಂದ ದಿಕ್ಕೇ ತೋರದೆ ಹರಿಯನ್ನು ಮೊರೆಹೊಕ್ಕ. ರುದ್ರನ ಈ ಭೀತಿಯನ್ನು ಪರಿಹರಿಸಲು ಜಗತ್ತೇ ಅಸಮರ್ಥವಾದಾಗ ಶ್ರೀಹರಿಯು ಮೋಹಿನೀ ಅವತಾರವನ್ನು ತಾಳಿ ಭಸ್ಮಾಸುರನನ್ನೇ ಭಸ್ಮಮಾಡಿ ರುದ್ರನಿಗೆ ಅಭಯದಾನಮಾಡಿದ.

'ಭಸ್ಮದೈತ್ಯ' ಎಂಬ ಶಬ್ದದಿಂದ ವೃಕಾಸುರನನ್ನೂ ಇಟ್ಟುಕೊಳ್ಳಬಹುದು.

ಶಕುನಿ ಎಂಬ ದೈತ್ಯನ ಮಗನಾದ ವೃಕಾಸುರನು ಪಾರ್ವತಿಯಲ್ಲಿ ಮನಸ್ಸಿಟ್ಟು ರುದ್ರನನ್ನು ಕುರಿತು ತಪಸ್ಸು ಮಾಡಿದನು. ಪ್ರತಿನಿತ್ಯವೂ ತನ್ನ ಮಾಂಸವನ್ನೇ ರುದ್ರನಿಗೆ ಆಹುತಿಯನ್ನಾಗಿ ನೀಡುತ್ತಿದ್ದನು. ಕೊನೆಗೊಂದು ದಿನ ರುದ್ರನು ಪ್ರತ್ಯಕ್ಷನಾಗಲಿಲ್ಲವೆಂದು ತನ್ನ ಶಿರವನ್ನೇ ಅರ್ಪಿಸಲು ಹೊರಟಾಗ ಮಹಾದೇವನು ಕರುಣೆಯಿಂದ ಪ್ರತ್ಯಕ್ಷನಾಗಿ 'ವರಬೇಡಿಕೋ ಎಂದನು. ಕೂಡಲೇ ಪಾಪಾತ್ಮನಾದ ವೃಕನು 'ನಾನು ಯಾರ ತಲೆಯಲ್ಲಿ ಕೈಯಿಡುವೆನೋ ಅವನು ಸುಟ್ಟು ಬೂದಿಯಾಗಲಿ' ಎಂದು ವರಬೇಡಿದನು. ರುದ್ರನು ಅನಿವಾರ್ಯವಾಗಿ 'ಓಂ' ಎಂದನು. ತತ್ ಕ್ಷಣವೇ ಪರೀಕ್ಷಿಸುವೆನೆಂದು ತನ್ನ ಕರವನ್ನು ಹರನ ಶಿರದಲ್ಲಿಯೇ ಇರಿಸಲು ತ್ವರೆಮಾಡಿದನು. ಇದರಿಂದ ಕಂಗಾಲಾದ ಹರನು ಭಯದಿಂದ ಓಡಿಕೊಂಡು ಹರಿಯ ಮೊರೆಹೊಕ್ಕನು. ಭಕ್ತಭಯಭಂಜಕನಾದ ಶ್ರೀಹರಿಯು ರುದ್ರನನ್ನು ಸಮಾಧಾನಪಡಿಸಿ ವೃಕನ ಬಳಿ ಬಂದನು.

'ವೃಕ! ಅವಸರದಿಂದ ಎಲ್ಲಿಗೆ ಓಡುತ್ತಿರುವಿ!' ಎಂದು ಮೃದು ಮಧುರವಾಗಿ ವಿಚಾರಿಸಿದ. ವೃಕನು, 'ಜಗತ್ತನ್ನೆ ಭಸ್ಮಮಾಡುವ ಸಾಮರ್ಥ್ಯ ತನ್ನ ಕೈಯಲ್ಲಿದೆ' ಎಂದು ಕೊಬ್ಬಿನಿಂದ ತನಗೆ ದೊರೆತ ರುದ್ರವರವನ್ನರುಹಿದನು. ಪ್ರತಿಯಾಗಿ ಶ್ರೀಹರಿಯು 'ವೃಕನೇ! ನಿನ್ನ ತಪಸ್ಸೆಲ್ಲಾ ವ್ಯರ್ಥ. ರುದ್ರನ ವರದಲ್ಲಿ ನನಗಂತೂ

Rarest Archives

ವಿಶ್ವಾಸವಿಲ್ಲ. ಅವನು ದಕ್ಷಶಾಪದಿಂದ ಪ್ರೇತನಿಶಾಚರನಾಥನಾಗಿರುವನು. ಕ್ರೋಧನಾಥನ ನುಡಿಯನ್ನು ನಂಬಿದ ನೀನು ಮೂಢನಾಥನೇ ಸರಿ. ಬೇಕದರೆ ನಿನ್ನ ಕೈಯನ್ನೇ ನಿನ್ನ ತಲೆಯಲ್ಲಿಟ್ಟು ಪರೀಕ್ಷಿಸಿಕೋ. ನನ್ನ ಮಾತು ಅಸತ್ಯವಾದಲ್ಲಿ ನನ್ನನ್ನೂ ದಹಿಸಿಬಿಡು.' ಎಂದ. ವೃಕಾಸುರನು ಹರಿಯಮಧುರಮಾತುಗಳನ್ನು ಲಾಲಿಸುತ್ತ ಹರಿಯು ಮಾಯಾಮಾಣವಕನೆಂಬುದನ್ನರಿಯದೆ ತನ್ನ ಕೈಯನ್ನು ತಲೆಯಲ್ಲಿರಿಸಿ ಭಸ್ಮನಾದ.

ಇಂದಿಗೂ ಯಾರಾದರೂ ತಲೆಯಲ್ಲಿ ಕೈಯಿಟ್ಟಕೊಂಡು ಕುಳಿತಿದ್ದರೆ, 'ಕೈ ತೆಗೆ, ಅಪಶಕುನ!'ಎನ್ನುತ್ತೇವೆ. ಈ ರೂಢಿ ವೃಕನ ಪುಣ್ಯಹ್ರಾಸದ ಕಥೆಯನ್ನು ನೆನಪಿಸುತ್ತದೆ. ಈ ಕಥೆಯಿಂದ ಸಾಧಕರಾದವರಿಗೆ ರಾಜರೊಂದು ಸಂದೇಶವನ್ನು ನೀಡುತ್ತಾರೆ.

> **ಭಿಯಾ ಧಾವಂತಮೀಶಾನಂ ಧೀಯಾ ಯೋಸಾವಪೀಪಲತ್ ।**
> **ಶ್ರೀಯಾ ಯೋಸೌ ವೃತೋದೇವಃ ಶ್ರಯಾಸ್ಯ ಚರಣಾಂಬುಜಮ್ ॥**

'ಹೆದರಿ ಓಡುವ ರುದ್ರನ ಭಯವನ್ನು ಶ್ರೀಹರಿಯು ಕೇವಲ ಬುದ್ಧಿಬಲದಿಂದ ಕಾಪಾಡಿದ. ಯಾವುದೇ ಆತಂಕಗಳಿಗೆ ಎಂದೂ ಭಾಗಿಯಾಗದೆ ಲಕುಮಿಯೊಟ್ಟಿಗೆ ಆನಂದದಿಂದ ವಿಹರಿಸುತ್ತಾ ಭಕ್ತರನ್ನು ಸಲಹುವ ಶ್ರೀಹರಿಯನ್ನು ಬಿಟ್ಟ ಅನ್ಯರ ಪಾದಗಳನ್ನೇಕೆ ಆಶ್ರಯಿಸುತ್ತೀ! ಭಕ್ತನೇ!' 'ಶ್ರಯಾಸ್ಯ ಚರಣಾಂಬುಜಮ್' 'ಶ್ರೀಹರಿಯ ಚರಣಕಮಲಗಳನ್ನೇ ಆಶ್ರಯಿಸು.' ಎಂದು ಉಪದೇಶಿಸುತ್ತಾರೆ.

೧೧. ಹರಿಯಿಂದ ರಕ್ಷೆ ಪಡೆದ ದಕ್ಷ ಸಾಕ್ಷಿ

ಒಮ್ಮೆ ಬ್ರಹ್ಮಾದಿಗಳು ಸೇರಿದ ಸಭೆಗೆ ದಕ್ಷ ಪ್ರಜಾಪತಿಯು ಬಂದನು. ತಾನೊಬ್ಬ ಚಕ್ರವರ್ತಿ, ತನ್ನನ್ನು ಎಲ್ಲರೂ ಗೌರವಿಸಬೇಕೆಂದು ಅಭಿಮಾನ ಹೊಂದಿದ್ದ. ಅದರಂತೆ ಎಲ್ಲರೂ ಗೌರವಿಸಿದರು. ಆದರೆ ಬ್ರಹ್ಮಾಧಿಷ್ಠಾನದಲ್ಲಿ ಭಗವದ್ಧ್ಯಾನನಿರತರಾದ ರುದ್ರದೇವರು ದಕ್ಷನ ಆಗಮನದ ಕಡೆ ಆದರಿಸಲಿಲ್ಲ. ಹರನು ತನ್ನ ಇರವನ್ನು ಅರಿತೂ ತನ್ನನ್ನಾದರಿಸಲಿಲ್ಲವೆಂಬ ಅಪಮಾನದ ದುಃಖ ದಕ್ಷನನ್ನು ಚುಚ್ಚಿತು. ಇದರಿಂದ ದಕ್ಷನು ಕೋಪರೂಪನಾದ. ಹರನಿಗೆ ಮಾನಾ ಪಹರಣರೂಪವಾದ ಪ್ರತೀಕಾರವ ಮಾಡಬೇಕೆಂದು ವಾಜಪೇಯ ಯಾಗವನ್ನು ನಿಮಿತ್ತ ಮಾಡಿಕೊಂಡ.

ಯಾಗದ ಪ್ರಚಾರ ಭರದಿಂದ ನಡೆಯಿತು. ಆದರೆ ಹರನಿಗೆ ಆಹ್ವಾನದ ಸುಳಿವೂ ಸಿಗದಂತೆ ವ್ಯವಸ್ಥೆಯನ್ನು ಮಾಡಲಾಯಿತು. ಆದರೂ ಪಶುಪತಿಯ ಸತಿಯಾದ

Rarest Archiver

ಪಾರ್ವತಿಯು ಪತಿಯ ಮಾತನ್ನು ಮೀರಿ ದಕ್ಷಾಧ್ವರಕ್ಕೆ ಬಂದಳು. ಅವಳನ್ನು ಅಲ್ಲಿ ಯಾರೂ ಆದರಿಸಲಿಲ್ಲ. ಆದರೂ ಸಹಿಸಿಕೊಂಡಿದ್ದಳು. ಯಾವಾಗ ಪಶುಪತಿಗೆ ವಿಹಿತವಾದ ಆಹುತಿಯನ್ನು ನೀಡಬಾರದೆಂದು ದಕ್ಷ ತಡೆದನೋ ಆವಾಗ ದಾಕ್ಷಾಯಿಣಿಗೆ ದುಃಖ ತಡೆಯದಾಯಿತು. ಪತಿಗೆ ಆದ ಅಪಮಾನವನ್ನು ತಡೆಯಲಾರದೆ ತಡಮಾಡದೆ ತನ್ನೊಡಲೊಳಗಿನ ಅನಲವನ್ನು ಧ್ಯಾನಿಸಿ ತನ್ನ ತನುವನ್ನು ತ್ಯಜಿಸಿದಳು. ತನ್ನ ಪತ್ನಿಯ ಮೃತಿಯಿಂದ ಪಶುಪತಿಯ ಕ್ರೋಧ ತಾರಕಕ್ಕೇರಿತು. ಕ್ರೋಧಾಗ್ನಿಯಿಂದ ಪ್ರಜ್ವಲಿಸಿ ವಿಕಟರೂಪದ ವೀರಭದ್ರನನ್ನು ಪ್ರಕಟಗೊಳಿಸಿದನು. ಉಗ್ರರೂಪದ ವೀರಭದ್ರನು ಚಂಡೀಶ ಮುಂತಾದ ಭೂತಗಣದೊಂದಿಗೆ ಹೋಗಿ ದಕ್ಷಾಧ್ವರವನ್ನು ಧ್ವಂಸಗೊಳಿಸಿದನು. ನಂತರ ಶಿವನೇ ಆಗಮಿಸಿ ದಕ್ಷನನ್ನು ಯಜ್ಞಪಶುವನ್ನಾಗಿ ಚಿಂತಿಸಿ ಸಂಹರಿಸಿ ಹರಿಗೆ ಅರ್ಪಿಸುವನು. ಪುನಃ ದೇವತೆಗಳೆಲ್ಲರೂ ಹರಿಯನ್ನಾರಾಧಿಸಿ ದಕ್ಷನ ಪುನರ್ಜನ್ಮಕ್ಕೆ ಕಾರಣರಾದರು. ಅತ್ಯಂತ ಪಶ್ಚಾತ್ತಾಪದಿಂದ ಪರಿಶುದ್ಧನಾದ ದಕ್ಷನು ಬಹಳ ಆದರರಿಂದ ಶಿವನನ್ನು ಆರಾಧಿಸಿದನು. ಕ್ಷಮೆಯನ್ನು ಬೇಡಿದನು.

ದಕ್ಷತ್ರ್ಯಕ್ಷರ ಸಭೆಯಲ್ಲಿ ಲೋಕಾಧ್ಯಕ್ಷನಾದ ಪುಂಡರೀಕಾಕ್ಷ ಪ್ರತ್ಯಕ್ಷನಾದನು. ಲಕ್ಷ್ಮೀಕಾಂತನನ್ನು ಕಂಡ ಬ್ರಹ್ಮೇಂದ್ರಾದಿ ಸಮಸ್ತ ದೇವತೆಗಳೂ ಋಷಿಗಳೂ ದಿಗ್ಗನೆದ್ದು ಮುಗಿಬಿದ್ದರು. ಹರಿಯ ತೇಜಸ್ಸಿನಿಂದ ಇತರರ ತೇಜಸ್ಸೆಲ್ಲವೂ ಕ್ಷೀಣವಾಯಿತು. ನಾಲಿಗೆ ಒಣಗಿತು.

'ತತ್ತೇಜಸಾ ಹತರುಚಃ ಸನ್ನಜಿಹ್ವಾಃ ಸಸಾಧ್ವಸಾಃ' ಎನ್ನುತ್ತದೆ ಭಾಗವತ. ಹೀಗೆ ಪಶ್ಚಾತ್ತಾಪದಗ್ಧನಾದ ದಕ್ಷಪ್ರಜಾಪತಿಯ ಯಜ್ಞಕ್ಕೆ ಸರ್ವೋತ್ತಮನಾದ ಶ್ರೀಹರಿಯು ಆಗಮಿಸಿ ದೇವ-ಋಷಿಗಳ ಸಭೆಯಲ್ಲಿ ದಕ್ಷನನ್ನು ಅನುಗ್ರಹಿಸಿದ. ದಕ್ಷಪ್ರಜಾಪತಿಯಾದರೂ ಯಜ್ಞಭಾಗಕ್ಕೆ ಅರ್ಹರಾದ ಎಲ್ಲ ದೇವತೆಗಳನ್ನೂ ಪೂಜಿಸಿದ. ರುದ್ರದೇವರಿಗೂ ಯೋಗ್ಯವಾದ ಹವಿರ್ಭಾಗವನ್ನು ನೀಡಿದ. ಇದರಿಂದ ಪ್ರೀತರಾದ ದೇವತೆಗಳೆಲ್ಲರೂ 'ದಕ್ಷನಿಗೆ ಧರ್ಮಬುದ್ಧಿ ಸ್ಥಿರವಾಗಲಿ' ಎಂದು ಹರಸಿ ಹೊರಟರು. ಹೀಗೆ ತಪ್ಪು ಮಾಡಿಯೂ ಪಶ್ಚಾತ್ತಾಪದ ಮೂಲಕ ಹರಿಯೊಲುಮೆಗೆ ಪಾತ್ರನಾದ ದಕ್ಷನು ನಮಗೆ ಸಾಕ್ಷಿಯಾಗಿದ್ದಾನೆ.

೧೨. ಕೇವಲ ಪ್ರಾರ್ಥನೆಯಿಂದ ಹರಿಯೊಲುಮೆಗೆ ಪಾತ್ರಳಾದ ದ್ರೌಪದಿಯು ಸಾಕ್ಷಿ

'ಧರ್ಮಾಚಾರವನ್ನು ತೋರಿಕೊಡುವ ಕ್ಷತ್ರಿಯನಿಗೆ ಜೂಜು ಸರ್ವಥಾ

Rarest Archive

ಧರ್ಮವಲ್ಲ.' ಎಂಬುದು ಭೀಮ ವಿದುರಾದಿಗಳು ಧರ್ಮರಾಜನನ್ನು ತಡೆದರೂ ಕಲಿಪ್ರವೇಶದಿಂದ ಧರ್ಮರಾಜ ಜೂಜಾಟಕ್ಕೆ ಮುಂದಾದ. ತನ್ನೆಲ್ಲಾ ಸಂಪತ್ತನ್ನು ಜೂಜಿನಲ್ಲಿ ಪಣವಿಟ್ಟು ಕುಟಿಲಮತಿಯಾದ ಶಕುನಿಯಿಂದ ಪರಾಜಿತನಾದ. ನಂತರ ನಕುಲ, ಸಹದೇವ, ಅರ್ಜುನ, ಭೀಮರನ್ನೂ ಪಣಕ್ಕಿಟ್ಟು ಸೋತ. ಕೊನೆಗೆ ಉಪಾಯಕಾಣದೆ ದ್ರೌಪದಿಯನ್ನೂ ಪಣಕ್ಕಿಟ್ಟು ಸೋತ.

ದ್ರೌಪದಿಯನ್ನು ಪಣದಿಂದ ಗೆದ್ದ ದುರ್ಯೋಧನನ ಬುದ್ಧಿ ಅತ್ಯಂತ ನೀಚ ನಿರ್ಣಯಕ್ಕೆ ಮುಂದಾಯಿತು. ತನ್ನ ಸಾರಥಿಯಾದ ಪ್ರತಿಗಾಮಿಯನ್ನು ದ್ರೌಪದಿಯ ಬಳಿ ಕಳುಹಿಸಿದ. 'ಪರಾಜಿತಳಾದ ದ್ರೌಪದಿಯು ತುಂಬಿದ ಸಭೆಗೆ ಬರಬೇಕೆಂದು'ಹೇಳಿದ್ದ. ಅದರಂತೆ ಹೇಳಿದಾಗ ದ್ರೌಪದಿಯು 'ಅಸೂರ್ಯಂ ಪಶ್ಯಾಃ ರಾಜಾದಾರಾಃ'-'ಅಂತಃಪುರದ ಸ್ತ್ರೀಯರು ರಾಜಗೃಹದ ಹೊರಗೆ ಹೋಗಬಾರದು. ಹೀಗಿರಲು ಗುರುಹಿರಿಯರು ತುಂಬಿದ ಸಭೆಗೆ ಬರಲಾರೆ' ಎಂದಳು. ಸಾರಥಿ ವಿಫಲನಾಗಿ ಬಂದ. ಭೀಮನಿಗೆ ಅಂಜಿದ ಸಾರಥಿಯನ್ನು ಕಂಡ ದುರ್ಯೋಧನ ದುಶ್ಶಾಸನನಿಗೆ ಆದೇಶಿಸಿದ. ಈ ಸಂದರ್ಭದಲ್ಲಿ ದ್ರೌಪದಿಯು ರಜಸ್ವಲೆಯಾಗಿದ್ದಳು. ಏಕವಸ್ತ್ರಧಾರಿಣಿಯಾಗಿದ್ದಳು. ಇಂತಹ ಅವಸ್ಥೆಯಲ್ಲಿರುವ ಪತಿವ್ರತಾಶಿರೋಮಣಿ ಯಾದ ದ್ರೌಪದಿಯ ಬಳಿ ದುಶ್ಶಾಸನ ಪರಮ ನೀಚನಾಗಿ ಬಂದ. ಪಾಪಪುರುಷರಲ್ಲಿ ಅಗ್ರಸ್ಥಾನ ಪಡೆದ ಈತ ಸ್ವತಃ ತನ್ನ ತಾಯಿಯಾದ ಗಾಂಧಾರಿಯ ಎದುರಿನಲ್ಲಿಯೆ ಏಕವಸ್ತ್ರಧಾರಿಣಿಯಾದ ದ್ರೌಪದಿಯ ಕೇಶಪಾಶಕ್ಕೆ ಕೈಹಾಕಿ ಸಭೆಗೆ ಸೆಳೆದು ತಂದ. ವಿಷಣ್ಣಳಾದ ದ್ರೌಪದಿಯು ಭೀಷ್ಮಾದಿಗಳು ತುಂಬಿದ ಸಭೆಯಲ್ಲಿ ಧರ್ಮದ ಮರ್ಮವನ್ನರಿತ ವೀರಮಾತೆಯಾಗಿ ಪ್ರಶ್ನಿಸುತ್ತಾಳೆ -'ಭೀಷ್ಮಾದಿಗಳೇ! ಇಂಥಹ ಅಧರ್ಮವನ್ನು ಧಾರ್ಮಿಕರಾದ ನೀವುಗಳು ಏಕೆ ತಡೆಯುತ್ತಿಲ್ಲ ! ಮೋಸದಿಂದ ತುಂಬಿದ ಜೂಜಿನಲ್ಲಿ ಗೆದ್ದಮಾತ್ರಕ್ಕೆ ಹೇಗೆ ನ್ಯಾಯವಾಗಿ ಗೆದ್ದಂತಾದೀತು ? ಜೂಜನ್ನು ಧರ್ಮಕಾರ್ಯವೆಂದು ಬಲ್ಲವರು ಹೇಳುವುದಿಲ್ಲ. ವಿಶೇಷವಾಗಿ ಕ್ಷತ್ರಿಯರಿಗೆ ಅದು ಸರ್ವಥಾ ಧರ್ಮವಲ್ಲ.

ಯೇ ಧರ್ಮಂ ನ ವದಂತೀಹ ನ ತೇ ವೃದ್ಧಾ ಇತೀರಿತಾಃ I
ಅವೃದ್ಧಮಂಡಿತಾಂ ನೈವ ಸಭೇತ್ಯಾಹುರ್ಮನೀಷಿಣಃ II

ಯಾರು ಧರ್ಮವನ್ನು ಹೇಳುವುದಿಲ್ಲವೋ ಅವರು ಜ್ಞಾನಿಗಳೆನಿಸುವುದಿಲ್ಲ.

Rarest Archiver

ಜ್ಞಾನಿಗಳಿಲ್ಲದ ಸಭೆಯನ್ನು ಸಭೆ ಎಂದು ತಿಳಿದವರು ಹೇಳುವುದಿಲ್ಲ. ನಿದ್ದೆ ಮಾಡುತ್ತಿರುವವರ ತಲೆಕಡಿದು ಜಯಗಳಿಸಿದೆ ಎಂಬಂತಿದೆ ನಿಮ್ಮ ವರ್ತನೆ. ಸಹಧರ್ಮಿಣಿಯಾದ ನಾನು ಗಂಡನನ್ನು ಬಿಟ್ಟು ಬರಬೇಕೆಂದು ಯಾವ ಶಾಸ್ತ್ರದಲ್ಲಿದೆ?' ಹೀಗೆ ಪ್ರಶ್ನಿಸಲು ಕಲ್ಯಾವೇಶದಿಂದ ಮೂಢರಾದ ಭೀಷ್ಮಾದಿಗಳು ಧರ್ಮರಾಜನನ್ನೇ ಕೇಳು ಎಂದರು. ಅವರ ಉತ್ತರದಿಂದ ಧರ್ಮಜ್ಞನಾದ ವಿದುರ ತತ್ತರಿಸಿದ. ಶುದ್ಧಬುದ್ಧಿಯಿಂದ ಇದು ಅಧರ್ಮ ಎಂದು ಸ್ಪಷ್ಟವಾದ ಮಾತುಗಳಿಂದ ಉತ್ತರಿಸಿದ. ಆದರೆ ಅವರನ್ನು ಎದುರಿಸುವ ಶಕ್ತಿ ವಿದುರನಿಗಿರಲಿಲ್ಲ.

ಧರ್ಮವನ್ನು ಬಿಟ್ಟ ಧರ್ಮಜನನ್ನು, ಕ್ಲೇಶದಿಂದ ಕಣ್ಣೀರಿಡುವ ದ್ರೌಪದಿಯನ್ನು ಕಂಡ ಭೀಮಸೇನ ಯುವರಾಜನ ಕರ್ತವ್ಯವನ್ನು ನಿರ್ವಹಿಸಿದ. ತನ್ನ ಅಣ್ಣನನ್ನು ಕುರಿತು 'ದ್ರೌಪದಿಯನ್ನು ಜೂಜಿನಲ್ಲಿಟ್ಟ ನಿನ್ನ ಕೈಗಳನ್ನು ಸುಡಬೇಕು.' ಎಂದು. ಅರ್ಜುನ 'ಹಾಗೆ ಮಾಡಬೇಡ' ಎಂದು ಗಾಬರಿಯಿಂದ ಮುಂದೆ ಬಂದ. ಅದಕ್ಕೆ ನೀತಿಜ್ಞನಾದ ಭೀಮ ಹೇಳುತ್ತಾನೆ -

ವ್ಯಕ್ತವ್ಯಂ ನ ತು ಕರ್ತವ್ಯಂ ತಸ್ಮಾನ್ನ ಹಿ ಮಯಾ ಕೃತಮ್ ।
ಉತ್ತಮೇ ವಚಸಾ ಶಿಕ್ಷಾ ಮಧ್ಯಮೇಽರ್ಥಾಪಹಾರಣಮ್ ।
ಅಧಮೇ ದೇಹದಂಡಶ್ಚ ತಸ್ಮಾದ್ ವಾಚ್ಯೋ ಯುಧಿಷ್ಠಿರಃ ॥

'ಅರ್ಜುನ! ಹೆದರಬೇಡ. ಉತ್ತಮರು ಅಪರಾಧವೆಸಗಿದಾಗ ಹೇಳಬೇಕೇ ವಿನಹ ಹಾಗೆ ಮಾಡಬಾರದು. ಆದ್ದರಿಂದಲೇ ಕೈ ಸುಡುವುದಾಗಿ ಬಾಯಲ್ಲಿ ಹೇಳಿದೆ. ಈ ಧರ್ಮದ ಮರ್ಮವನ್ನು ಅರಿತುಕೋ. ಉತ್ತಮರಿಗೆ ಮಾತಿನಿಂದಲೇ ಶಿಕ್ಷೆ, ಮಧ್ಯಮರಿಗೆ ಧನಾಪಹಾರ, ಅಧಮರಿಗೆ ದಂಡನೆ. ಆದ್ದರಿಂದ ನಾನು ಯುಧಿಷ್ಠಿರನಿಗೆ ಮಾತಿನಿಂದಲೇ ಹೇಳಬೇಕು,'ಎಂದು.

ಹೀಗೆ ಪಾಂಡವರು ಅಸಹಾಯಕರಾಗಿ ಗೋಳಿಡುತ್ತಿರಲು ಕರ್ಣನು ದ್ರೌಪದಿಗೆ ಹೇಳುತ್ತಾನೆ-

'ಸುಂದರಿ! ನಿನಗೆ ಇನ್ನು ಪತಿಗಳಿಲ್ಲ. ದುರ್ಯೋಧನನ ಮನೆಗೆ ತೆರಳು.' ಎಂದು ಮೂದಲಿಸುತ್ತಾನೆ. ದುರ್ಯೋಧನಾದಿಗಳ ಇಂತಹ ಅತ್ಯಂತ ಕೀಳುಮಟ್ಟದ ದುರ್ನಡತೆಗಳನ್ನು ಕಂಡ ಭೀಮಸೇನ ಸಿಡಿದೆದ್ದು ನಿಂತ. 'ಎಲ್ಲರನ್ನೂ ಪರಿವಾರಸಮೇತನಾಗಿ ನನ್ನ ಕಾಲಿನಿಂದ ತುಳಿದು ಹೊಸಕಿ ಹಾಕುತ್ತೇನೆ.' ಎಂದು

Rarest Archiver

ಗುಡುಗಿದ. ಸಮಗ್ರ ಸಭೆ ಭಯದಿಂದ ನಡುಗಿತು. ಇದನ್ನು ಕಂಡ ದುರ್ಯೋಧನನು ಭೀಮಸೇನನು ನೋಡುವಂತೆ ದ್ರೌಪದಿಗೆ ತನ್ನ ತೊಡೆಯನ್ನು ತೋರಿದ. ಭೀಮನು ಆ ತೊಡೆಗಳನ್ನು ಗದೆಯಿಂದ ಸೀಳುವುದಾಗಿ ಪ್ರತಿಜ್ಞೆಗೈದ. ಪುನಃ ನೀಚನಾದ ದುರ್ಯೋಧನನು ಶ್ರೀಕೃಷ್ಣಪರಮಾತ್ಮನನ್ನೇ ಪಣವಾಗಿಟ್ಟು ಆಡಿ ಎಂದು ಛೇಡಿಸಿದ. ಇದನ್ನು ಸಹಿಸದ ಭೀಮ 'ನಿನ್ನನ್ನು ಯುದ್ಧದಲ್ಲಿ ನೆಲದ ಮೇಲೆ ಕೆಡವಿ ತಲೆಯನ್ನು ಚೆನ್ನಾಗಿ ತುಳಿಯುವೆ' ಎಂದು ದೃಢಪ್ರತಿಜ್ಞೆಯನ್ನು ಮಾಡಿದ. ಇಷ್ಟಾದರೂ ಮತಿಭ್ರಷ್ಟನಾದ ನೀಚ ಧಾರ್ತರಾಷ್ಟ್ರನು ದುಶ್ಶಾಸನಿಗೆ ಪಾಂಡವರ ಬಟ್ಟೆಗಳನ್ನು ಸೆಳೆ ಎಂದ. ಪಾಂಡವರೆಲ್ಲರೂ ಕೌರವರ ಅಸಭ್ಯತೆಯನ್ನು ತಿಳಿಯಪಡಿಸಲು ಸ್ವತಃ ತಾವಾಗಿಯೆ ಕೃಷ್ಣಾಜಿನ ಧರಿಸಿ ವಸ್ತ್ರಗಳನ್ನು ಕೊಟ್ಟರು.

ಆದರೆ ಇಷ್ಟೇ ನೀಚಕೃತ್ಯಗಳಿಂದ ತುಷ್ಟರಾಗದ ದುಷ್ಟರು ಪತಿವ್ರತಾಪರಾಯಣಳಾದ ದ್ರೌಪದಿಯ ಮಾನಾಪಹರಣವೆಂಬ ನೀಚಕೃತ್ಯಕ್ಕೆ ಮುಂದಾದರು. ದುಶ್ಶಾಸನನ ನೀಚ ಕುಕೃತ್ಯವನ್ನು ನೋಡಿ ಸಹಿಸಲಾಗದ ಭೀಮ ಅವನ ಎದೆ ಬಗೆದು ರಕ್ತಪಾನಮಾಡುವ ಪ್ರತಿಜ್ಞೆಗೈದ. ದ್ರೌಪದಿಯಾದರೂ ಬೇರೆ ದಾರಿಕಾಣದೆ ಸದಾ ಕೃಷ್ಣನನ್ನು ಸ್ಮರಿಸುವ ಸ್ವಭಾವವನ್ನು ಹೊಂದಿದ್ದರೂ ವಿಶೇಷವಾಗಿ 'ಹೇ ಕೃಷ್ಣ! ದ್ವಾರಕಾವಾಸಿನ್! ಎಲ್ಲಿರುವೆ ? ಹೇ ಯಾದವನಂದನ! ಕೌರವರು ನನ್ನನ್ನು ಬಾಧಿಸುತ್ತಿರುವದನ್ನರಿಯೆಯಾ ? ಹೇ ಪ್ರಭೋ ! ರಮಾನಾಥ ! ಗೋಕುಲ ಪಾಲಕ! ದುಃಖನಾಶಕ ! ಕೌರವರೆಂಬ ದುಷ್ಟಸಮುದ್ರದಲ್ಲಿ ಮುಳುಗುತ್ತಿರುವ ನನ್ನನ್ನು ಉದ್ಧರಿಸು. ಜನಾರ್ದನ! ಕೃಷ್ಣ! ಕೃಷ್ಣ! ಮಹಾಯೋಗಿನ್ ! ಜಗತ್ಪತೇ ! ದುಃಖಿಯಾದ ನಾನು ನಿನ್ನ ಮೊರೆ ಹೊಕ್ಕಿರುವೆ. ಶರಣಾಗತ ವತ್ಸಲನೆ! ಕಾಪಾಡು! ಗೋವಿಂದ !' ಎಂದು ಹರಿಯಲ್ಲಿ ಮೊರೆ ಇಟ್ಟಳು.

ದ್ರೌಪದಿಯ ಪರಿಶುದ್ಧವಾದ ಪ್ರಾರ್ಥನೆಯಿಂದ ಪ್ರಸನ್ನನಾದ ಧರ್ಮಸ್ವರೂಪನಾದ ಶ್ರೀಕೃಷ್ಣನು ದಯೆಯಿಂದ ಉದಿಸಿ ದ್ರೌಪದಿಯನ್ನು ಬಗೆಬಗೆಯ ನವಿರಾದ ಬಂಗಾರದ ಬಣ್ಣದ ವಸನಗಳಿಂದ ಅಲಂಕರಿಸಿ ವ್ಯಸನವನ್ನು ಪರಿಹರಿಸಿದ. ದುಶ್ಶಾಸನನು ಸೀರೆಗಳನ್ನು ಸೆಳೆದು ಅವುಗಳ ಕೊನೆಯನ್ನು ಕಾಣದೆ ಸೋತು ಮೈ ಬೆವೆತುಕೊಂಡು ನೆಲದಲ್ಲಿ ಕುಸಿದುಬಿದ್ದ. ದ್ರೌಪದಿಯು ಹರಿಯನ್ನು ಪ್ರಾರ್ಥಿಸಿದ ಪರಿ, ಹರಿಯು ದ್ರೌಪದಿಯ ಮಾನವನ್ನು ಸಂರಕ್ಷಿಸಿದ ಪರಿಗಳನ್ನು ಕಂಡ ಸಭಾಸದರು ಬೆರಗಾದರು.

Rarest Archiver

ಸಜ್ಜನರೇ ! ದ್ರೌಪದಿಗೆ ಬಂದ ಇಂತಹ ಸ್ಥಿತಿಯು ನಮಗೆಂದೂ ಬಹುಷಃ ಬಾರದು. ಆದರೂ ಹರಿನಾಮಘೋಷ ನಮ್ಮ ನಾಲಿಗೆಯಲ್ಲಿ ಬಾರದು. ಸಾವಿರಾರು ಮಂದಿ ನೆರೆದ ಸಭೆಯಲ್ಲಿ ಅಬಲೆಗೆ ಸಬಲರ ಸಹಾಯ ದೊರೆಯದಿದ್ದಾಗಲೂ ಶರಣಾಗತಿಯ ಪರಿಯನ್ನರಿತ ದ್ರೌಪದಿಯು ಹರಿಯನ್ನೊಲಿಸಿಕೊಂಡು ತನ್ನ ಮಾನವನ್ನು ಉಳಿಸಿಕೊಂಡಳು.

ಇದರಂತೆ ನಮ್ಮ ಮಾನಾಭಿಮಾನಗಳ ಸಂರಕ್ಷಕರಾದವರು ಶ್ರೀಹರಿಯನ್ನ ಹೊರತು ಜಗತ್ತಿನಲ್ಲಿ ಯಾರೂ ಇಲ್ಲ. ಸಂರಕ್ಷಣೆಯ ಜವಾಬ್ದಾರಿಯನ್ನು ಪರದೇವನೊಬ್ಬನೇ ಬಲ್ಲ. ಇದನ್ನು ದ್ರೌಪದಿಯ ದೃಷ್ಟಾಂತದಿಂದರಿತು ಸ್ತುತಿಸಿದಲ್ಲಿ ಸೊಲ್ಲ ಲಾಲಿಸಿ ಹರಿಯೊಬ್ಬನೆ ಪೊರೆಯಬಲ್ಲ. ಕಷ್ಟದಲ್ಲಿ ನೀವು ಹೀಗೆ ಪ್ರಾರ್ಥಿಸುತ್ತೀರಲ್ಲ ?

೧೩. ಗರ್ಭದಲ್ಲಿಯೂ ಹರಿಯಿಂದಲೇ ಚಿಕಿತ್ಸೆ

ಧೂರ್ತ ದುರ್ಯೋಧನಾದಿಗಳೆನ್ನಲ್ಲ ಸಂಹರಿಸಿದ ಬಳಿಕ ಭಗವಾನ್ ಶ್ರೀಕೃಷ್ಣ ಪರಮಾತ್ಮನು ದುಃಖಿತರಾದ ಪಾಂಡವರೆಲ್ಲರನ್ನೂ ಸಮಾಧಾನಪಡಿಸಿದನು. ಧರ್ಮರಾಜನನ್ನು ಧರ್ಮದ ಸುಪರ್ದಿಗೆಯಲ್ಲಿ ಮೂರ್ಧಾಭಿಷಿಕ್ತನನ್ನಾಗಿಸಿ ದ್ವಾರಕೆಗೆ ಹೊರಡಲನುವಾದನು.

ಶ್ರೀಕೃಷ್ಣನು ರಥವನ್ನೇರಿ ಹೊರಡಬೇಕೆನ್ನುವಾಗ 'ಕೃಷ್ಣ ! ಕೃಷ್ಣ!' ಎಂಬ ಆರ್ತನಾದ ಕೇಳಿಬಂತು. ಶ್ರೀಕೃಷ್ಣ ಅತ್ತ ಚಿತ್ತೈಸಿದ. ಅಭಿಮನ್ಯುವಿನ ಸಹಧರ್ಮಿಣಿಯಾದ ಉತ್ತರಾದೇವಿ ಭಯದಿಂದ ಕಂಗೆಟ್ಟು ಎದುರಾಗಿ ಓಡಿಬಂದಳು. ಶ್ರೀಕೃಷ್ಣನ ಬಳಿ ಆರ್ತಳಾಗಿ ಮೊರೆಯಿಡುತ್ತಾಳೆ -

'ಮಹಾಯೋಗಿಯಾದ ದೇವದೇವೋತ್ತಮನಾದ ಜಗದ್ರಕ್ಷಕನಾದ ಶ್ರೀಕೃಷ್ಣನೇ! ನನ್ನನ್ನು ಕಾಪಾಡು. ಕಾಯ್ದ ಕಬ್ಬಿಣದ ಅಲುಗಿನಿಂದ ಕೂಡಿದ ಬ್ರಹ್ಮಾಸ್ತ್ರವು ನನ್ನ ಗರ್ಭವನ್ನೇ ಗುರಿಮಾಡಿಕೊಂಡು ಬರುತ್ತಿದೆ. ಪಾಂಡವರ ವಂಶಾಂಕುರವನ್ನು ಸಂರಕ್ಷಿಸು. ಈ ಅಸ್ತ್ರ ನನ್ನನ್ನು ದಹಿಸಲಿ. ಆದರೆ ಧರ್ಮದ ಸ್ಥಾಪನೆಗಾಗಿ ಬೆಳೆಯುವ ಗರ್ಭ ಅಳಿಯದಿರಲಿ.' 'ಕಾಮಂ ದಹತು ಮಾಂ ನಾಥ ಮಾ ಮೇ ಗರ್ಭೋ ನಿಪಾತ್ಯತಾಮ್' ಎಂದು.

Rarest Archiver

ಉತ್ತರೆಯ ಗರ್ಭಕ್ಕೆ ಅಶ್ವತ್ಥಾಮನು ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿದ್ದಾನೆ. ಪಾಂಡವರ ಮೇಲಿನ ಹಗೆತನದಿಂದ ದುರ್ಯೋಧನನ ದುರ್ನೀತಿಗೆ ವಶನಾಗಿ ಸಮಗ್ರ ಪಾಂಡವಸಂತತಿಯ ನಿರ್ಮೂಲನೆಗೆ ಪಣ ತೊಟ್ಟಿದ್ದಾನೆ. 'ಶ್ರೀಕೃಷ್ಣನೇ! ನಿನ್ನ ಹೊರತಾಗಿ ರಕ್ಷಕರು ಅನ್ಯರಿಲ್ಲವೆಂದು'ಗೋಳಿಟ್ಟಳು. ಗರ್ಭಕ್ಕೆ ಬಂದ ಆಪತ್ತನ್ನು ಪರಿಹರಿಸುವ ಸಾಮರ್ಥ್ಯ ಯಾರಿಗೂ ಇರಲಿಲ್ಲ.

ಅಶ್ವತ್ಥಾಮನ ದುರ್ನಡತೆಯನ್ನು ಕಂಡ ಶ್ರೀಕೃಷ್ಣನು ಅಶ್ವತ್ಥಾಮನಿಗೆ ತಿಳಿ ಹೇಳಿದ. ಅವನು ಕೇಳದಿದ್ದಾಗ ಶ್ರೀಕೃಷ್ಣನೂ ಸಾತ್ವಿಕ ಕ್ರೋಧದಿಂದ ಗರ್ಭರಕ್ಷಣೆಯ ಪಣ ತೊಡುತ್ತಾನೆ -

'ಪಶ್ಯ ಮೇ ದುರ್ಮತೇ ವೀರ್ಯಂ ಯತ್ತೇ ಶಕ್ಯಂ ಕುರುಷ್ವ ತತ್ ।
ಉಜ್ಜೀವಯಾಮ್ಯಹಂ ರಾಜನ್ ಯತತಃ ಶಕ್ತಿತೋಽಪಿ ತೇ ॥

'ಅಶ್ವತ್ಥಾಮ! ಮನಸ್ಸಿಗೆ ತೋಚಿದ್ದನ್ನು ಆಚರಿಸು. ನಿನ್ನ ನೀಚ ಕುಕೃತ್ಯಗಳನ್ನು ಸದೆಬಡಿಯುವ ಅದಟು ನನ್ನಲ್ಲಿದೆ. ಬ್ರಹ್ಮಾಸ್ತ್ರದಿಂದ ಶಿಶು ಮೃತವಾದರೂ ನಿನ್ನ ಶಕ್ತಿಯನ್ನು ಮೀರಿ ನನಗೆ ಪ್ರಾಣಾವಾಹನೆ ಮಾಡಲು ತಿಳಿದಿದೆ' ಎಂದು ರಕ್ಷಣೆಯ ದೀಕ್ಷೆಯನ್ನು ತೊಟ್ಟು ದ್ವಾರಕೆಯ ಕಡೆ ನಡೆಯುತ್ತಾನೆ.

ಉತ್ತರೆಯ ಗರ್ಭದೊಳಗೆ ಒಂದು ರೂಪದಿಂದ ಪ್ರವೇಶಿಸಿ ಗರ್ಭದ ಸುತ್ತಲೂ ಸುಡಲು ಹವಣಿಸುವ ಅಸ್ತ್ರವನ್ನು ಸ್ವತಃ ಗದಾಪಾಣಿಯಾಗಿ ಶ್ರೀಹರಿಯು ಸಂರಕ್ಷಿಸುತ್ತಾನೆ. ಗರ್ಭ ಬೆಳೆದು ಉತ್ತರೆಯು ಕೂಸನ್ನು ಹೆತ್ತಿದ್ದಾಳೆ. ಹುಟ್ಟಿದ ಕೂಸು ಬ್ರಹ್ಮಾಸ್ತ್ರ ತಗುಲಿ ಪ್ರಾಣ ಬಿಟ್ಟಿದೆ. ಇದನ್ನು ಕಂಡು ಉತ್ತರೆಯ ಆರ್ತನಾದ ತಾರಕಕ್ಕೇರಿದಾಗ ದ್ವಾರಕಾಧೀಶ ಅಲ್ಲಿಗಾಗಮಿಸಿದ. ಜಡವಾದ ಶಿಶುವಿನ ನಡುವನ್ನು ಹಿಡಿದು ಮೈಸವರಿದ. ತತ್‌ಕ್ಷಣದಲ್ಲಿ ಮೃತಶಿಶುವಿನಲ್ಲಿ ಚೈತನ್ಯದ ಆವಾಹನೆಯಾಯಿತು.

ಇದನ್ನು ಕಂಡ ಉತ್ತರೆ-ಕುಂತಿ-ಪಾಂಡವಾದಿಗಳಿಗೆ ಹರಿಕರುಣೆಗೆ ಏನು ಕೃತಜ್ಞತೆಯನ್ನು ಸಲ್ಲಿಸಬೇಕೆಂಬುದೇ ತಿಳಿಯದಾಯಿತು. ಹೀಗೆ ಹೆಜ್ಜೆ ಹೆಜ್ಜೆಗೂ ಪಾಂಡವರ ಸಮಗ್ರ ಜೀವನದ ರಕ್ಷಣೆಯ ಹೊಣೆಗಾರಿಕೆಯನ್ನು ಹೊತ್ತುಕೊಂಡವ ಶ್ರೀಕೃಷ್ಣ. ಎಲ್ಲರ ಬದುಕಿನಲ್ಲಿಯೂ ಹೀಗೆ ರಕ್ಷಣೆಯನ್ನು ನೀಡಿಯೇ ಇರುತ್ತಾನೆ. ಅರ್ಥಮಾಡಿಕೊಳ್ಳುವವ ಭಕ್ತರ ಗುಂಪಿಗೆ ಸೇರುತ್ತಾನೆ.

Rarest Archiver

